ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜನವರಿ 2014 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 4
ಪುಟ : 20
ಬೆಲೆ : ₹ 5/-

## ಮಹಿಳಾ ಕಾರ್ಯಕಾರಿಣಿ ಅಭ್ಯಾಸ ವರ್ಗ – ಮುಂಬೈ








ಸ್ವಾಮಿ ವಿವೇಕಾನಂದರ ಶೈಕ್ಷಣಿಕ ವಿಚಾರಗಳು....7

ನಮ್ಮ ನೆಚ್ಚಿನ ನಾಗಭೂಷಣ....9

ಅಧ್ಯಾಪನ – ಒಂದು ವೃತ್ತಿಯೇ ಅಥವಾ ಸಾಮಾಜಿಕ ಹೊಣೆಯೇ?....12

ಪರೀಕ್ಷಾ ತಯಾರಿ –ಹೇಗೆ?....14

A Journal of Karnataka State Secondary Teachers' Association

# ಸಂಪಾದಕೀಯ

ವಿಶ್ವ ವಿಜೇತ, ವಿಶ್ವ ಮಾನವ, ವೀರ ಸಂನ್ಯಾಸಿ ವಿವೇಕಾನಂದರ ಜನ್ಮ ದಿನೋತ್ಸವವು ಈ ತಿಂಗಳ 12 ರಂದು ವಿಜೃಂಭಣೆಯಿಂದ ನಡೆದಿದೆ. ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಎತ್ತರಕ್ಕೆ ಹಾರಿಸಿ, ದೇಶದ ಸ್ಥಾನವನ್ನು ಏರಿಸಿದ ಮಹಾನ್ ಮಾನವ ವಿವೇಕಾನಂದರು ಜನಿಸಿ 150 ವರ್ಷಗಳು ಕಳೆದಿವೆ. ಈ ಮಹಾಚೇತನದ 150ನೇ ಜನ್ಮಾಚರಣೆಯ ಸಲುವಾಗಿ ಕಳೆದ ಎರಡು ವರ್ಷಗಳೂ ಶ್ರದ್ಧೆ, ಉತ್ಸಾಹದಿಂದ ಅನೇಕ ಕಾರ್ಯಕ್ರಮಗಳನ್ನು ದೇಶಾದ್ಯಂತ ನಡೆಸಲಾಗಿದೆ. ಪರಿಣಾಮವಾಗಿ ನಮ್ಮ ಯುವಕರು ವಿವೇಕಾನಂದರ ಜೀವನ, ಸಂದೇಶಗಳಿಂದ ಪ್ರಭಾವಿತರಾಗಿರುವರೆಂಬ ಆಶಾ ಭಾವನೆ ನಮ್ಮದು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಕಳೆದ ವರ್ಷ ವಿದ್ಯಾರ್ಥಿಗಳಿಗಾಗಿ ನಡೆಸಿದ ಸಮರ್ಥ ಭಾರತ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ನೋಡಿದಾಗ ಈ ಮರಿಸಿಂಹಗಳು ವಿವೇಕಾನಂದರಿಂದ ಪ್ರಭಾವಿತರಾಗಿರುವುದು ಕಂಡು ಬರುತ್ತದೆ. ಇಂಥವರಿಂದ ಭವಿಷ್ಯದಲ್ಲಿ ಆದರ್ಶ ಸಮಾಜವನ್ನು ನಿರೀಕ್ಷಿಸಬಹುದು. ವಿವೇಕ ನುಡಿಯ ಶಕ್ತಿಯೇ ಅಂತಹುದು. ಈ ಸಂಚಿಕೆಯನ್ನು ವಿವೇಕಾನಂದ–150ರ ವಿಶೇಷವಾಗಿ ಹೊರತರುತ್ತಿದ್ದೇವೆ.

ಜನವರಿ ತಿಂಗಳು ಸಂಕ್ರಾಂತಿಯ ಸಂಭ್ರಮ. ಹೆಣ್ಣು ಮಕ್ಕಳು ಎಳ್ಳು, ಬೆಲ್ಲ, ಕಬ್ಬು, ಸಕ್ಕರೆ ಅಚ್ಚುಗಳನ್ನು ನಂಟರು, ಇಷ್ಟರಿಗೆ ಬೀರುತ್ತಾರೆ. 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತನಾಡು' ಎಂಬ ಹಿರಿಯರ ನುಡಿಯೇ ಇದೆ. ಪರಸ್ಪರರು ಭೇಟಿಯಾಗಿ ಸಂಬಂಧವನ್ನು ಗಟ್ಟಿಗೊಳಿಸಿಕೊಳ್ಳಲು ಇದು ಸುಸಂದರ್ಭ. ಸಂಕ್ರಾತಿಯಂದು ಸೂರ್ಯ ತನ್ನ ಪಥವನ್ನು ಧನೂರಾಶಿಯಿಂದ ಮಕರರಾಶಿಗೆ ಪ್ರವೇಶಿಸುತ್ತಾನೆ. ಆದ್ದರಿಂದ ಇದು 'ಮಕರ ಸಂಕ್ರಮಣ. ಸಂಕ್ರಮಣ ಎಂದರೆ ಬದಲಾವಣೆ. ಪ್ರಕೃತಿಯಲ್ಲೂ ಚಳಿಯ ತೀವ್ರತೆ ಕಡಮೆಯಾಗಿ ಬಿಸಿಲಿನ ಝಳ ಕ್ರಮೇಣ ಹೆಚ್ಚಾಗುತ್ತದೆ. ಹಾಗೆಯೇ ಮನುಷ್ಯನ ಸ್ವಭಾವ, ನಡವಳಿಕೆಯಲ್ಲೂ ಬದಲಾವಣೆಯನ್ನು ನಿರೀಕ್ಷಿಸುವುದು ಸಹಜವೇ.

ಸುಭಾಷ್ ಚಂದ್ರ ಬೋಸ್ ದೇಶ ಭಕ್ತರಾಗಿ ತಮ್ಮದೇ ವಿಶಿಷ್ಟ ಛಾಪನ್ನು ಮೂಡಿಸಿದವರು. ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪ್ರಯತ್ನ ಶ್ಲಾಘನೀಯ. ಜನವರಿ 23 ಸುಭಾಷ್ ಚಂದ್ರ ಬೋಸರ ಜನ್ಮ ದಿನವೂ ಹೌದು. ತಮ್ಮದೇ ಸೈನ್ಯವನ್ನು ಕಟ್ಟಿ ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸಲು ಅವರು ಮಾಡಿದ ಪ್ರಯತ್ನ ವಿಶೇಷ.ಅವರನ್ನು ಈ ಹೊತ್ತು ನೆನೆಯುವುದು ನಮ್ಮ ಕರ್ತವ್ಯ.

ಪ್ರತಿ ವರ್ಷದಂತೆ ಈ ವರ್ಷವೂ ಗಣರಾಜ್ಯೋತ್ಸವ ಬರುತ್ತಿದೆ. ಆದರೆ ಈ ವರ್ಷ ದೆಹಲಿ ಆಡಳಿತದಲ್ಲಿ ಹೊಸತನದ ಉತ್ಸಾಹವಿದೆ. ಸ್ವಾರ್ಥ, ಭ್ರಷ್ಟಾಚಾರ, ಲಂಚಗುಳಿತನಗಳಿಂದ ಸಿಡಿದೆದ್ದ ಆಮ್ ಆದ್ಮಿ ಪಕ್ಷದಿಂದ ದೆಹಲಿ ಆಡಳಿತದಲ್ಲಿ ಸಂಕ್ರಾಂತಿ ಉಂಟಾಗುತ್ತದೆಂಬ ಸದಾಶಯ ಎಲ್ಲರದು.

ಜನವರಿ ತಿಂಗಳು ಬಂದರೆ ವಿದ್ಯಾರ್ಥಿಗಳ ಸಮಯವೆಲ್ಲ ಓದಿಗೇ ಮೀಸಲು. ವಿದ್ಯಾರ್ಥಿಗಳಿಗೆ ನೆರವಾಗಲು 'ಶಿಕ್ಷಕ ಸಮಾಚಾರ' ಪರೀಕ್ಷಾ ಮಾರ್ಗ ಸೂಚಿ ಪ್ರಕಟಿಸುತ್ತಿದೆ. ಶಿಕ್ಷಕರಿಗೂ ಈ ಲೇಖನ ಸಹಾಯಕವಾಗುತ್ತದೆಂಬುದು ನಮ್ಮ ಭಾವನೆ.

ನಮ್ಮೆಲ್ಲ ಶಿಕ್ಷಕ ಮಿತ್ರರಿಗೂ ಸಂಕ್ರಾಂತಿಯ ಹಾಗೂ ಗಣರಾಜ್ಯೋತ್ಸವದ ಶುಭಾಶಯಗಳು.

ಸಂಪಾದಕ

# ವಿವೇಕವಾಣಿ




ಸಮಸ್ತ ವಿಶ್ವದ ಅನಂತ ಶಕ್ತಿಯೆಲ್ಲವೂ ನಿಮ್ಮದೇ! ನೀವು ದುರ್ಬಲರೆಂಬುದೆಲ್ಲ ಒಂದು ಮೂಢನಂಬಿಕೆ. ಕಿತ್ತೊಗೆಯಿರಿ ಆ ಭಾವನೆಯನ್ನು ! ನಾವು ಧೈರ್ಯಶಾಲಿಗಳಾಗೋಣ!

# ಪರಿವಿಡಿ


- ಮುಂಬೈ ಜ್ಞಾನ ಯಾತ್ರೆ 3
- ಸಂಕ್ರಾಂತಿ 4
- ರಾಷ್ಟ್ರ ಜಾಗೃತಿಯ ಹರಿಕಾರ – ವಿವೇಕಾನಂದ 5
- ಶಿಕ್ಷಕಿಯರೊಂದಿಗೆ ಮಾತು 6
- ಸ್ವಾಮಿ ವಿವೇಕಾನಂದರ ಶೈಕ್ಷಣಿಕ ವಿಚಾರ 7
- ನಮ್ಮ ನೆಚ್ಚಿನ ನಾಗಭೂಷಣ 9
- ಸರ್ಕಾರಕ್ಕೆ ಒಂದು ಮನವಿ 11
- ಅಧ್ಯಾಪನ – ಒಂದು ವೃತ್ತಿಯೇ ಅಥವಾ ಸಾಮಾಜಿಕ ಹೊಣೆಯೇ ? 12
- ಪರೀಕ್ಷಾ ತಯಾರಿ ಹೇಗೆ ? 14
- ರಾಷ್ಟ್ರಕವಿ ಜಿ.ಎಸ್.ಎಸ್.ಗೆ ನಮನ 17
- ಸ್ವಾಮಿ ವಿವೇಕಾನಂದ ಮಾತೃಭಕ್ತಿ 19


### ಮುಖಪುಟ ಚಿತ್ರಗಳ ವಿವರ

ಮುಂಬೈನಲ್ಲಿ ಎ.ಬಿ.ಆರ್.ಎಸ್.ಎಂ. ಮಹಿಳಾ ಸಮ್ಮೇಳನ ನಡೆದ ಭಾವಚಿತ್ರ.

# ಮಹಿಳಾಮಣಿಗಳ ಮುಂಬೈ ಜ್ಞಾನ ಯಾತ್ರೆ

ಶ್ರೀ ಶಕೆ 1935 ವಿಜಯನಾಮ ಸಂವತ್ಸರ ಮಾರ್ಗಶಿರ ಮಾಸದ ಕೃಷ್ಣ ಪಕ್ಷದ ಸಪ್ತಮಿ ತಿಥಿಯಂದು ಅಂದರೆ ದಿನಾಂಕ 24.12.2013 ರ ಮಂಗಳವಾರ ಮಂಗಳ ಭಾವನೆಗಳೊಂದಿಗೆ ಸೀತಾಲಕ್ಷ್ಮಿ ಅಕ್ಕನವರ ನೇತೃತ್ವದಲ್ಲಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳ ಮಹಿಳಾ ಪ್ರತಿನಿಧಿಗಳೊಂದಿಗೆ ನಮ್ಮ ಮುಂಬೈ ಪಯಣ. ವೇಳಾಪಟ್ಟಿಯಂತೆ ಬೆಳಿಗ್ಗೆ 10.00 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆಯನ್ನು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಅಧ್ಯಕ್ಷರಾದ ಶ್ರೀಯುತ ವಿಮಲ್ ಪ್ರಸಾದ್ ಅಗರ್‌ವಾಲ್, ಮಾ, ಶಾಂತಕ್ಕ, ಅ.ಭಾ.ರಾ.ಶೈ.ಮಹಾಸಂಘದ ಮಹಿಳಾ ಸಚಿವರಾದ ಪ್ರಿಯಂವಧ, ಸಂಜೀವಿನಿ ರಾಯ್ಕರ್‌ರವರ ಉಪಸ್ಥಿತಿಯಲ್ಲಿ ದೀಪ ಬೆಳುಗುವುದರೊಂದಿಗೆ ಅಖಿಲ ಭಾರತೀಯ ಮಹಿಳಾ ಕಾರ್ಯಕರ್ತೆಯರ ಅಭ್ಯಾಸ ವರ್ಗ ಪ್ರಾರಂಭವಾಯಿತು.

ಉದ್ಘಾಟನೆಯ ನಂತರ ಶಾಂತತೆಯ ಮೂರ್ತಿಯಾದ ಮಾ.ಶಾಂತಕ್ಕನವರು ಪ್ರಸ್ತುತ ಸಮಾಜದಲ್ಲಿ ಮಹಿಳೆಯರಿಗಿರುವ ಸಮಸ್ಯೆಗಳ ಬಗ್ಗೆ ಸವಿವರ ಭಾಷಣ ಮಾಡಿದರು. ದೇವರ ಕೃಪೆಯಿದ್ದರೆ ಮಾತ್ರ ನಮಗೆ ಮೂರು ಮುಖ್ಯ ವಿಷಯಗಳು ಲಭಿಸುತ್ತವೆ. ಅವೆಂದರೆ ಮನುಷ್ಯತ್ವ, ಮುಮುಕ್ಷತ್ವ ಮತ್ತು ಮಹಾನ್ ಪುರುಷರ ಸಾನಿಧ್ಯ. ಆ ಬೆಳಗಿನ ತರಗತಿಯಲ್ಲಿಯೇ ನನಗೆ ಈ ಮೂರರಲ್ಲಿ ಕೊನೆಯದಂತೂ ಲಭ್ಯವಿದೆಯೆಂದನಿಸಿತು. ಶಾಂತಕ್ಕನವರ ಸರಳತೆ, ಭಾಷಣದಲ್ಲಿರುವ ನಿರರ್ಗಳತೆ ನನ್ನನ್ನು ಆಕರ್ಷಿಸಿತು. ಶಾಂತಕ್ಕನವರೇ ಶಕ್ತಿ ಸ್ವರೂಪ ಭಾರತೀಯ ನಾರಿ ಎಂಬ ವಿಚಾರದೊಂದಿಗೆ ಭಾಷಣ ಮಾಡಿದರು. ಅವರ ಭಾಷಣ ಎಷ್ಟು ಪ್ರೇರಣಾದಾಯಕವಾಗಿತ್ತೆಂದರೆ ನಮಗೆ ಗೊತ್ತಿಲ್ಲದಂತೆ ನಮ್ಮಲ್ಲಿರುವ ಅನೇಕ ಶಕ್ತಿಗಳ ಪರಿಚಯವಾಗುತ್ತಿತ್ತು. ದೇವಿಯ ಪ್ರತಿರೂಪವಾದ ಸ್ತ್ರೀ ಸೃಷ್ಟಿ ಮಾಡುವುದರಲ್ಲಷ್ಟೇ ಅಲ್ಲ, ತನ್ನ ಸೃಷ್ಟಿಗೆ ಜೀವನ ಮಾಡುವ ಕಲೆಯನ್ನು ಕಲಿಸುತ್ತಾ ತನ್ನೆಲ್ಲಾ ಜವಾಬ್ದಾರಿಗಳನ್ನು ಹೇಗೆ ನಿಭಾಯಿಸುತ್ತಾಳೆಂಬುದನ್ನು ವಿವರಿಸಿದರು. ಅವರ ವಿಚಾರಧಾರೆ ನದಿಯ ಪ್ರವಾಹಧಾರೆಯಂತೆ ಹರಿಯುತ್ತಿತ್ತು.

ನಂತರ 03.15 ರಿಂದ 04.30 ರವರೆಗೆ ಅ.ಭಾ.ರಾ.ಶೈ. ಮಹಾಸಂಘದ ದಾಯಿತ್ವದನುಸಾರವಾಗಿ ಸಂಘದ ಕಾರ್ಯಕ್ರಮಗಳ ಬಗ್ಗೆ ಹಿರಿಯ ಮಹಿಳಾ ಸದಸ್ಯರು ಎಲ್ಲರೊಂದಿಗೆ ಚರ್ಚೆ ನಡೆಸಿದರು. ನಂತರ ನಾಯಕತ್ವದ ಗುಣಗಳಾವುವು? ಮತ್ತು ನಾಯಕತ್ವವನ್ನು ಹೇಗೆ ನಿಭಾಯಿಸಬೇಕೆಂಬುದರ ಬಗ್ಗೆ ಡಾ. ವಿಮಲ್ ಪ್ರಸಾದ್ ಅಗರ್‌ವಾಲ್‌ರವರು ತಿಳಿಸಿದರು. ಮಹಿಳಾ ಕಾರ್ಯಕರ್ತೆಯರ ಸಂಘಟನೆಯ ಸಮಯದಲ್ಲಿ ಬರುವಂತಹ ಸಮಸ್ಯೆಗಳಾವುವು ? ಮತ್ತು ಆ ಸಮಸ್ಯೆಗಳನ್ನು ಹೇಗೆ ಬಗೆಹರಿಸುವುದು ಎಂಬುದರ ಬಗ್ಗೆ ಸವಿವರ ಚರ್ಚೆ ನಡೆಯುವುದರೊಂದಿಗೆ ಮೊದಲನೇ ದಿನದ ಕಾರ್ಯಕ್ರಮ ಮುಕ್ತಾಯಗೊಂಡಿತು.

27.12.2013ರ ಶುಭ ಶುಕ್ರವಾರವನ್ನು ಹಿಂದಿನ ದಿನದ ಎಲ್ಲಾ ವಿಷಯಗಳ ಸವಿನೆನಪುಗಳೊಂದಿಗೆ ಹಾಗೂ ಇಂದು ನಡೆಯಬೇಕಾದ ವಿಷಯಗಳ ಬಗ್ಗೆ ಗಮನಿಸುತ್ತಾ ಪ್ರಾರಂಭಿಸಿದೆವು. ನಂತರ ಅ.ಭಾ.ರಾ.ಶೈ.ಮಹಾಸಂಘದ ಅಧ್ಯಕ್ಷರಾದ ಡಾ. ವಿಮಲ್ ಪ್ರಸಾದ್ ಅಗರ್‌ವಾಲ್‌ರವರು ಶೈಕ್ಷಿಕ ಮಹಾಸಂಘದ ಹುಟ್ಟು ಹಾಗೂ ಬೆಳವಣಿಗೆ ಹಾಗೂ ಕಾರ್ಯಗಳ ಬಗ್ಗೆ ವಿವರ ನೀಡಿದರು. ನಂತರ 10.30 ಗಂಟೆಗೆ ಮಾ. ಇಂದುಮತಿ ಕಾಟದರೆಯವರು ಶಿಕ್ಷಣದ ಮಾಧ್ಯಮದಿಂದ ಸಂಸ್ಕಾರದ ವ್ಯವಸ್ಥೆ ಎಂಬ ವಿಚಾರವಾಗಿ ಮಾತನಾಡಲು ಅವರನ್ನು ಸಭಾಮಂಚಕ್ಕೆ ಕರೆಯುವ ಭಾಗ್ಯ ನನಗೆ ಲಭಿಸಿತ್ತು ಮತ್ತು ಅಂತಹ ಮಹಾನ್ ವ್ಯಕ್ತಿಯೊಂದಿಗೆ ಸಭಾಮಂಚದಲ್ಲಿ ಕೂಡುವ ಅವಕಾಶ ನನಗೆ ದೊರಕಿದ್ದು ನನ್ನ ಸೌಭಾಗ್ಯವೇ ಸರಿ. ಅವರು ತಮ್ಮ ವಿಚಾರಧಾರೆಯಲ್ಲಿ ಸಂಸ್ಕಾರವೆಂದರೇನು? ಸಂಸ್ಕಾರವಿಲ್ಲದ ಶಿಕ್ಷಣ ವಿನಾಶಕಾರಿ. ಯಾರ ಬಳಿ ಸಂಸ್ಕಾರವಿಲ್ಲವೊ ಅವರು ಜ್ಞಾನವನ್ನು ಸ್ವೀಕರಿಸಲು ಸಾಧ್ಯವಿಲ್ಲ. ನಾವು ಶಿಕ್ಷಕನಲ್ಲಿ ಸಂಸ್ಕಾರವಿಲ್ಲದಿದ್ದರೂ ಚೆನ್ನಾಗಿ ಬೋಧಿಸುತ್ತಾನೆ ಎಂದು ಹೇಳುತ್ತೇವೆ. ಅದು ತಪ್ಪು ಮಕ್ಕಳಲ್ಲಿ ಸಂಸ್ಕಾರ ಬೆಳೆಸಬೇಕಾದ ಶಿಕ್ಷಕನಲ್ಲಿಯೇ ಸಂಸ್ಕಾರವಿಲ್ಲದಿದ್ದರೆ ಅಂತಹ ಶಿಕ್ಷಕ ಮಕ್ಕಳಿಗೆ ಏನು ಕಲಿಸಬಲ್ಲ ?

ಶಿಕ್ಷಕರ ಆಚಾರದಿಂದ ಮಕ್ಕಳಲ್ಲಿ ಸಂಸ್ಕಾರ ಬರುತ್ತದೆಯೆಂದು ಹೇಳಿದರು. ಮೊದಲು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳಬೇಕು, ಒಪ್ಪಿಕೊಳ್ಳುವಂತಿದ್ದರೆ ಒಪ್ಪಿಕೊಳ್ಳಬೇಕು ನಂತರ ಆ ಕೆಲಸವನ್ನು ಮಾಡಬೇಕು ಎಂದು ಹೇಳಿದರು. ಬಾಹ್ಯ ಸ್ವಚ್ಛತೆಗಿಂತ ಆಂತರಿಕ ಸ್ವಚ್ಛತೆಗೆ ಮಹತ್ವ ನೀಡಬೇಕೆಂದು ಹೇಳಿದರು. ಪಂಚಭೂತಗಳನ್ನು ದೇವತೆಗಳೆಂದು ತಿಳಿದು ಅವುಗಳ ರಕ್ಷಣೆ ಮಾಡಬೇಕೆಂದು ಹೇಳಿದರು. ಮನುಷ್ಯನಲ್ಲಿ ಪ್ರಕೃತಿ ಪ್ರೇಮ ಕಡಿಮೆಯಾಗುತ್ತಿದೆಯೆಂದು ಹೇಳಿದರು. ಯಾವ ಸಮಾಜದಲ್ಲಿ

(8ನೇ ಪುಟಕ್ಕೆ.....)

# ಸಂಕ್ರಾಂತಿ



■ ವಿ. ರಾಜ
ಅಧ್ಯಕ್ಷರು, ಬೆಂಗಳೂರು ದಕ್ಷಿಣ ಜಿಲ್ಲೆ, ಕ.ರಾ.ಮಾ.ಶಿ.ಸಂ

ಸನಾತನ ಭಾರತೀಯರ ಮಹಾಪರ್ವಗಳಲ್ಲಿ 'ಸಂಕ್ರಾಂತಿ'ಯು ಅತ್ಯಂತ ಮುಖ್ಯವಾದ ಒಂದು ಪರ್ವವಾಗಿದೆ. ಈ ಸಂಕ್ರಾಂತಿಗೆ 'ಮಕರಸಂಕ್ರಾಂತಿ, ಮಕರ ಸಂಕ್ರಮಣ, ಮಕರ ಸಂಕ್ರಮಾಯನ, ಉತ್ತರಾಯಣ ಪುಣ್ಯಕಾಲ' ಎಂಬ ಹೆಸರುಗಳೂ ಇವೆ. ತಮಿಳು ನಾಡಿನಲ್ಲಿ 'ಪೊಂಗಲ್ ಎಂದು ಕರೆಯುತ್ತಾರೆ. ನಮ್ಮ ಜನಸಾಮಾನ್ಯರು ಎಳ್ಳಿನ ಹಬ್ಬ' ಎಂದು ಕರೆಯುವ ವಾಡಿಕೆ ಇದೆ. 'ಎಳ್ಳು ಬೆಲ್ಲವ ತಿಂದು ಒಳ್ಳೆಯ ಮಾತನಾಡು' ಎಂಬ ಕನ್ನಡ ಗಾದೆಗೆ ಮೂಲವಾಗಿರುವುದು ಈ ಸಂಕ್ರಾಂತಿ ಹಬ್ಬ.

ಉತ್ತರಾಯಣವನ್ನು ಪ್ರಾರಂಭಿಸುವ ದಿನವಾದ ಈ ಸಂಕ್ರಾಂತಿಗೆ ವಿಶೇಷವಾದ ಮಹತ್ವವಿದೆ. ಶ್ರದ್ಧಾ-ಭಕ್ತಿ-ವಿವೇಕಗಳಿಂದ ಮಾಡುವ ಸ್ನಾನ, ಧ್ಯಾನ, ದಾನ, ಹೋಮ, ಪೂಜೆ, ತರ್ಪಣ, ಶ್ರದ್ಧಾ ಮುಂತಾದವುಗಳಿಗೆ ಸಂಕ್ರಾಂತಿಯು ಪ್ರಶಸ್ತವಾದ ದಿನವಾಗಿದೆ ಎಂಬುದು ನಂಬಿಕೆಯಿದೆ.

ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಯಲ್ಲಿ ಪ್ರವೇಶ ಮಾಡುವುದನ್ನು ಸಂಕ್ರಾಂತಿ ಎಂದು ಕರೆಯುವ ರೂಢಿಯಿದೆ. ಇಂಥ ಸಂಕ್ರಾಂತಿಗಳು ಒಟ್ಟು ಹನ್ನೆರಡಿವೆ. ಮೇಷ ಸಂಕ್ರಾಂತಿ, ವೃಷಭ ಸಂಕ್ರಾಂತಿ, ಮಿಥುನ ಸಂಕ್ರಾಂತಿ, ವೃಶ್ಚಿಕ ಸಂಕ್ರಾಂತಿ, ಧನುಸ್ಸಂಕ್ರಾಂತಿ, ಮಕರಸಂಕ್ರಾಂತಿ, ಕುಂಭ ಸಂಕ್ರಾಂತಿ ಮತ್ತು ಮೀನ ಸಂಕ್ರಾಂತಿ.

ಇವುಗಳಲ್ಲಿ ಕರ್ಕಾಟಕ ಮತ್ತು ಮಕರ ಸಂಕ್ರಾಂತಿಗಳು ಅಯನ ಸಂಕ್ರಾಂತಿಗಳಾಗಿವೆ. ಒಟ್ಟು ಹನ್ನೆರಡು ಸಂಕ್ರಾಂತಿ ಗಳಿದ್ದರೂ, ಮಕರ ಸಂಕ್ರಾಂತಿಯನ್ನೇ ಜನಸಾಮಾನ್ಯರು ಸಂಕ್ರಾಂತಿಯೆಂದು ಕರೆಯುತ್ತಾರೆ. ಇದಕ್ಕೆ ಕಾರಣ ಇದು ತುಂಬಾ ವಿಶಿಷ್ಟವಾದುದು.

ಸೂರ್ಯನಾರಾಯಣನು ದಕ್ಷಿಣದಿಂದ ಉತ್ತರಕ್ಕೆ ಹೆಜ್ಜೆ ಇಡಲು ಪ್ರಾರಂಭಿಸುವ ಪವಿತ್ರ ಸಮಯವಾಗಿರುವುದರಿಂದ ಮಕರ ಸಂಕ್ರಾಂತಿಯನ್ನು ಉತ್ತರಾಯಣ ಪುಣ್ಯ ಕಾಲ ಎಂದು ಕರೆಯುತ್ತಾರೆ. ಹಾಲನ್ನು ಕಾಯಿಸಿ ಉಕ್ಕಿಸುವ ದಿನವಾದ್ದರಿಂದ ತಮಿಳು ನಾಡಿನಲ್ಲಿ 'ಪೊಂಗಲ್' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಎಳ್ಳಿನೊಡನೆ ಬೆಲ್ಲ ಮುಂತಾದುವನ್ನು ಮಿಶ್ರಣ ಮಾಡಿ ದಾನ ಮಾಡಿ ಸೇವಿಸುವ ಹಬ್ಬವಾದುದರಿಂದ 'ಎಳ್ಳಿನ ಹಬ್ಬ' ಎಂದು ಜನಸಾಮಾನ್ಯರು ಕರೆಯುವ ರೂಢಿಯಲ್ಲಿದೆ.

ಸಂಕ್ರಾಂತಿಯು ಸೌರಮಾನದ ಹಬ್ಬ. ಮಕರ ಮಾಸದ ಪ್ರಾರಂಭದಲ್ಲಿ ಮಕರ ಸಂಕ್ರಾಂತಿಯ ಆಚರಣೆ ನಡೆಯುತ್ತದೆ. ಚಾಂದ್ರಮಾನದಂತೆ ಪುಷ್ಯ ಮಾಸದಲ್ಲಿ ಇದು ಬರುತ್ತದೆ. ಜನವರಿ ಮಾಸದ 12, 13, 14 ಅಥವಾ 15 ನೆಯ ದಿನಾಂಕದಂದು ಈ ಸಂಕ್ರಾಂತಿಯು ಒದಗಿ ಬರುತ್ತದೆ.

ಎಳ್ಳಿನ ಹಬ್ಬವೆಂದೇ ಪ್ರಸಿದ್ಧವಾಗಿರುವ ಈ ಸಂಕ್ರಾಂತಿಯಲ್ಲಿ ಎಳ್ಳನ್ನು ನಾನಾ ವಿಧಗಳಲ್ಲಿ ಬಳಸುತ್ತಾರೆ. ಎಳ್ಳು ನೀರಿನ ತರ್ಪಣ ಕೊಡುತ್ತಾರೆ. ಎಳ್ಳಿನಿಂದ ನಿರ್ಮಿತವಾದ ಗೋವನ್ನು ದಾನ ಮಾಡುತ್ತಾರೆ. ಎಳ್ಳು, ಬೆಲ್ಲ, ಕೊಬ್ಬರಿ, ಕಡಲೆಕಾಯಿಗಳಿಂದ ಕೂಡಿದ ಪರಿಕರಗಳನ್ನು ದಾನಮಾಡುತ್ತಾರೆ. ಪೀಡಾ ಪರಿಹಾರಾರ್ಥವಾಗಿ ಶಿಶುಗಳ ಮೇಲೆ ಸುರಿಯುತ್ತಾರೆ. ಮಕ್ಕಳಿಗೆ ಆರುತಿಯನ್ನು ಎತ್ತಿ ಗುರುಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ.

ಗೋವುಗಳನ್ನು ಸಂಕ್ರಾಂತಿಯಂದು ವಿಶೇಷವಾಗಿ ಪೂಜಿಸಲಾಗುತ್ತದೆ. ಗೋವುಗಳಿಗೆ ಸ್ನಾನ ಮಾಡಿಸಿ ಕೊಂಬುಗಳಿಗೆ ಬಣ್ಣ ಹಚ್ಚಿ ಅಲಂಕರಿಸುತ್ತಾರೆ. ಅವುಗಳಿಗೆ ಪ್ರಿಯವೂ, ಹಿತಕರವೂ ಆದ ಸಂಪೂರ್ಣವಾದ ಹುಲ್ಲು, ಧಾನ್ಯ, ಕಾಯಿ, ಬೆಲ್ಲಗಳನ್ನು ತಿನ್ನಿಸುತ್ತಾರೆ. ಉರಿಯುತ್ತಿರುವ ಬೆಂಕಿಯನ್ನು ಗೋವುಗಳಿಂದ ದಾಟಿಸುತ್ತಾರೆ. ಇದಕ್ಕೆ ಕಿಚ್ಚು ಹಾಯಿಸುವುದು ಎಂದು ಹೆಸರು.

ಮಧ್ಯಾಹ್ನದ ಭೋಜನಾ ನಂತರ ಎಳ್ಳು ಬೆಲ್ಲ, ಕಬ್ಬಿನ ಜಲ್ಲೆಯ ತುಂಡುಗಳನ್ನು ಸಕ್ಕರೆಯಿಂದ ಮಾಡಿದ ವಿಗ್ರಹಗಳನ್ನು ಹಂಚುವ ಪದ್ಧತಿ ಇದೆ. ಆಗ ಬಂಧು ಮಿತ್ರರೊಡನೆ ಮಧುರವಾದ ಮಾತುಗಳನ್ನಾಡುತ್ತಾರೆ. ಮಾತು ಮಧುರವಾಗಿರಲೆಂದು 'ಎಳ್ಳು ಬೆಲ್ಲವನ್ನು ತಿಂದು ಒಳ್ಳೆಯ ಮಾತನಾಡು' ಎಂಬ ಲೋಲೋಕ್ತಿಯನ್ನು ಹೇಳುವುದುಂಟು.

ಸಂಕ್ರಾಂತಿಯ ಹಿಂದಿನ ದಿನವನ್ನು 'ಭೋಗಿಯ ಹಬ್ಬ' ವೆಂದೂ ಸಂಕ್ರಾಂತಿಯ ಮುಂದಿನ (ಮಾರನೇ) ದಿನವನ್ನು 'ಕನೂ' ಹಬ್ಬವೆಂತಲೂ ಕರೆಯುತ್ತಾರೆ. ಹಾಗಾಗಿ ಸಂಕ್ರಾಂತಿಯು ಯೋಗಿ ಭೋಗಿ ಇಬ್ಬರಿಗೂ ಪ್ರಿಯವಾಗಿದೆ, ಎಂಬ ಮಾತಿದೆ. ಇಂಥ ಶ್ರೇಷ್ಠವಾದ ಹಬ್ಬವಾಗಿರುವ ಸಂಕ್ರಾಂತಿಯುನ್ನು ನಾವೆಲ್ಲಾ ಶ್ರದ್ಧಾ ಭಕ್ತಿಗಳಿಂದ ಆಚರಿಸೋಣ.

**ಮಕರ ಸಂಕ್ರಾಂತಿಯು ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ.** ●

# ರಾಷ್ಟ್ರ ಜಾಗೃತಿಯ ಹರಿಕಾರ ಸ್ವಾಮಿ ವಿವೇಕಾನಂದ

ಹತ್ತೊಂಬತ್ತನೆಯ ಶತಮಾನದಲ್ಲಿ ಸ್ವಾಮೀಜಿ ಗೈದ ಮಹಾನ್ ಸಾಧನೆಯನ್ನು ಅರ್ಥಮಾಡಿಕೊಳ್ಳಲು ಅಂದಿನ ಭಾರತದ, ಅದರಲ್ಲೂ ಬಂಗಾಳ ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಿಸ್ಥಿತಿಯ ಬಗ್ಗೆ ತಿಳಿದುಕೊಳ್ಳುವುದು ಅವಶ್ಯ. ಈ ಬಗ್ಗೆ ಪ್ರಸಿದ್ಧ ವಿದ್ವಾಂಸರು ಈಗಾಗಲೇ ಹಲವಾರು ಅಧ್ಯಯನಗಳನ್ನು ನಡೆಸಿದ್ದಾರೆ. ಇಲ್ಲಿ ನಾವು ನಮ್ಮದೇ ಆದ ಅಧ್ಯಯನವನ್ನು ನಡೆಸಿದ್ದೇವೆ. ಅದರ ಆಧಾರದ ಮೇಲೆ ಸ್ವಾಮಿ ವಿವೇಕಾನಂದರು ಈ ಕೆಳಗಿನ ಕೊಡುಗೆಗಳನ್ನು ನೀಡಿದರು. ಎಂಬ ನಿರ್ಧಾರಕ್ಕೆ ಬಂದಿದ್ದೇವೆ.

### ರಾಷ್ಟ್ರೀಯ ಪ್ರಜ್ಞೆಯ ಸೃಷ್ಟಿ

ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಸಮಾಜ ಸುಧಾರಣಾ ಸಂಸ್ಥೆಗಳು ಮತ್ತು ಸಾಮಾಜಿಕ ಮುಖಂಡರು ಪ್ರಾದೇಶಿಕ ಆಂದೋಲಗಳನ್ನು ಮಾತ್ರವೇ ಪ್ರತಿನಿಧಿಸಿದ್ದರು. ಅವರು ರಾಷ್ಟ್ರೀಯ ಐಕ್ಯಮತವನ್ನಾಗಲಿ ಅಥವಾ ರಾಷ್ಟ್ರೀಯ ಪ್ರಜ್ಞೆಯನ್ನಾಗಲಿ ಸೃಜಿಸಲಿಲ್ಲ. ಹಾಗಿರದಿದ್ದರೂ ಕೂಡ, ಆ ದಿನಗಳ ಕಡೆಗೆ ನಾವು ದೃಷ್ಟಿ ಹಾಯಿಸಿದಾಗ, ನಮಗೆ ತೋರುವುದು ಏನೆಂದರೆ, ಅಂದಿನ ಧಾರ್ಮಿಕ ಆಂದೋಲನಗಳ ಮುಖಂಡರ ಸೀಮಿತ ವ್ಯಾಪ್ತಿ. ಜಾಗತಿಕ ದೃಷ್ಟಿಕೋನವಿರಲಿ, ಅವರು ರಾಷ್ಟ್ರೀಯ ದೃಷ್ಟಿಕೋನವನ್ನು ಬೆಳೆಸಿಕೊಂಡಿರಲಿಲ್ಲ. ಇದಕ್ಕೆ ಪ್ರತಿಯಾಗಿ, ಪ್ರಾರಂಭಿಕ ಹಂತದಿಂದಲೇ ಸ್ವಾಮಿ ವಿವೇಕಾನಂದರು ರಾಷ್ಟ್ರೀಯ ಮನೋಭಾವನೆಯನ್ನು ಹೊಂದಿದ್ದರು. ಅದಾದರೋ ಅವರ ವಿಶ್ವಾತ್ಮಕ ಮನೋಭಾವದ ಒಂದು ಭಾಗವೇ ಆಗಿತ್ತು.

ಸ್ವಾಮಿ ವಿವೇಕಾನಂದರನ್ನು ಭಾರತೀಯ ರಾಷ್ಟ್ರೀಯತೆಯ ಪ್ರಪ್ರಥಮ ಪ್ರತಿಪಾದಕರೆಂದು ಹಲವಾರು ವಿದ್ವಾಂಸರು ಮತ್ತು ಚಿಂತಕರು ಪರಿಗಣಿಸುತ್ತಾರೆ. ಪ್ರಸಿದ್ಧ ಇತಿಹಾಸಕಾರರೂ ವಿದ್ವಾಂಸರೂ ಆದ ಶ್ರೀ ಆರ್.ಸಿ ಮಜುಂದಾರ್ ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನೊಬ್ಬ ಇತಿಹಾಸಕಾರರಾದ ಶ್ರೀ ಆರ್.ಜಿ ಪ್ರಧಾನ್ ಅವರನ್ನು ಉಲ್ಲೇಖಿಸುತ್ತ ಅವರು ಹೀಗೆ ಬರೆಯುತ್ತಾರೆ. 'ಸ್ವಾಮಿ ವಿವೇಕಾನಂದರನ್ನು ಭಾರತೀಯ ರಾಷ್ಟ್ರೀಯತೆಯ ಜನಕರೆಂದು ಕರೆಯಬಹುದು. ಬಹುಮಟ್ಟಿಗೆ ಅದನ್ನು ಸೃಷ್ಟಿಸಿದವರು ಅವರೇ. ಇದಲ್ಲದೆ ಅವರ ಜೀವನವು



ಈ ರಾಷ್ಟ್ರೀಯತೆಯ ಅತ್ಯುನ್ನತವಾದ ಮತ್ತು ಉದಾತ್ತವಾದ ಮೌಲ್ಯಗಳ ಮೂರ್ತರೂಪವೇ ಆಗಿದೆ'. ಇದೇ ಬಗೆಯ ನಿಲುವನ್ನು ಹೆಸರುವಾಸಿಯಾದ ಇತಿಹಾಸಜ್ಞರು ಹಾಗೂ ವಿದ್ವಾಂಸರೂ ಆದ ರೆವೆರೆಂಡ್ ಸಿ.ಎಫ್ ಆಂಡ್ರ್ಯೂಸ್ ಅವರು ವ್ಯಕ್ತಪಡಿಸಿದ್ದಾರೆ. ಆಂಗ್ಲೇಯರಾದ ಇವರು ಕ್ರೈಸ್ತ ಮಿಷನರಿಯಾಗಿ ಭಾರತಕ್ಕೆ ಬಂದರು. ಆದರೆ ಮುಂದೆ ಮಹಾತ್ಮ ಗಾಂಧಿಯವರ ಅನುಯಾಯಿ ಯಾದರು. ಅವರು ಹೀಗೆ ಹೇಳುತ್ತಾರೆ. 'ಸ್ವಾಮೀಜಿಯವರ ನಿರ್ಭೀತ ದೇಶಭಕ್ತಿಯು ಭಾರತದಾದ್ಯಂತವೂ ರಾಷ್ಟ್ರೀಯ ಆಂದೋಲನಕ್ಕೆ ಹೊಸ ಛಾಯೆಯನ್ನೇ ನೀಡಿತು. ಭಾರತದ ನೂತನ ಜಾಗರಣಕ್ಕೆ, ಆ ಕಾಲದ ಯಾವುದೇ ಒಬ್ಬನೇ ವ್ಯಕ್ತಿಗಿಂತ, ಅತಿ ಹೆಚ್ಚು ಕೊಡುಗೆಯನ್ನು ಅವರು ನೀಡಿದ್ದಾರೆ.

ಇನ್ನೊಬ್ಬ ಇತಿಹಾಸಕಾರ ಮತ್ತು ರಾಜಕೀಯ ಮುತ್ಸದ್ದಿಯಾದ ಕೆ.ಎಂ. ಪಣಿಕ್ಕರ್ ಅವರು ಹೀಗೆ ಬರೆಯುತ್ತಾರೆ. 'ಹಿಂದೂಗಳ ನಡುವಣ ಸಮುದಾಯ ಭಾವನೆಯ ಉಗಮ ಮಾತ್ರವೇ, ಭಾರತೀಯ ರಾಷ್ಟ್ರೀಯತೆಗೆ ಕ್ರಿಯಾಶೀಲತೆಯನ್ನು ನೀಡಿರುವುದು ಮತ್ತು ಕಟ್ಟಕಡೆಗೆ ಭಾರತದ ಬಹುಸಂಖ್ಯೆಯ ವರ್ಗವನ್ನು ಒಂದು ರಾಜಕೀಯ ಶಕ್ತಿಯನ್ನಾಗಿ ಕೂಡಿಸಿರುವುದು. ಇದರ ಬಹುಪಾಲು ಯಶಸ್ಸು ಸೇರುವುದು ಸ್ವಾಮಿ ವಿವೇಕಾನಂದರಿಗೆ ... ಆರ್ಯ ಸಮಾಜ, ಬ್ರಹ್ಮ ಸಮಾಜ ಮೊದಲಾದ ಇತರ ಆಂದೋಲಗಳು, ಸಮಾನ ಅಖಂಡ ಭಾರತೀಯ ದೃಷ್ಟಿಯನ್ನು ಪ್ರಪ್ರಥಮ ಬಾರಿಗೆ ನೀಡಿದವರು ಸ್ವಾಮಿ ವಿವೇಕಾನಂದರು.

ಈ ಆಧುನಿಕ ಕಾಲದಲ್ಲಿ ಅಖಂಡ ಭಾರತದೊಡನೆ ಮತ್ತು ಎಲ್ಲಾ ಭಾರತೀಯರೊಡನೆ ತಮ್ಮನ್ನು ತಾದಾತ್ಮ್ಯಗೊಳಿಸಿಕೊಂಡ ಮೊಟ್ಟಮೊದಲ ಭಾರತೀಯ ನೇತಾರೆಂದರೆ ಸ್ವಾಮಿ ವಿವೇಕಾನಂದರು. ಅವರು ಭಾರತದ ಬಹುತೇಕ ಪ್ರದೇಶಗಳ ಪರ್ಯಟನ ಮಾಡಿದರು. ಹೋದಲ್ಲೆಲ್ಲಾ ಆಯಾ ಭಾಗಗಳ ಜನಸಾಮಾನ್ಯರೊಡನೆ ಬೆರೆತರು. ಅವರನ್ನೆಲ್ಲಾ ತಮ್ಮವರನ್ನಾಗಿ ಮಾಡಿಕೊಂಡರು. ಆ ಜನರೂ ಕೂಡ ಸ್ವಾಮೀಜಿಯವರನ್ನು ಮನಸಾರೆ ಪ್ರೀತಿಸಿದರು ಮತ್ತು ತಮ್ಮವರೆಂದೇ ಭಾವಿಸಿದರು. ಭಾರತದ ಇನ್ನಾವುದೇ ನೇತಾರನಲ್ಲಿ ಇರದಿದ್ದ ಸದ್ಗುಣವು ಸ್ವಾಮಿ ವಿವೇಕಾನಂದರಲ್ಲಿ ಸಹಜವಾಗಿ ಮತ್ತು ಸಮೃದ್ಧ

(8ನೇ ಪುಟಕ್ಕೆ.....)

# ಶಿಕ್ಷಕಿಯರೊಂದಿಗೆ ಮಾತು




■ ನಾಗಲಕ್ಷ್ಮಿ

ಕ್ರೈಸ್ತ ವರ್ಷಾರಂಭದ ಶುಭಾಶಯಗಳು.

ಇದು ಶಿಕ್ಷಕರಿಂದ ಶಿಕ್ಷಕರಿಗಾಗಿಯೇ ಹೊರಬರುತ್ತಿರುವ ಪತ್ರಿಕೆ. ಶಿಕ್ಷಕ ಸಹಕಾರ ಪ್ರೋತ್ಸಾಹದಿಂದಲೇ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲದಿಂದಲೂ ತನ್ನ ವೈಶಿಷ್ಟ್ಯದೊಂದಿಗೆ ಕಾರ್ಯನಿರ್ವಹಿಸುತ್ತಾ ಬಂದಿದೆ. ಈ ಸಹಕಾರ ಬಾಹ್ಯ, ಆಂತರಿಕ ಎರಡೂ ಪ್ರಕಾರಗಳಿಂದ ಒದಗುತ್ತಿದೆ. ಅಂದರೆ, ಪತ್ರಿಕೆಯ ಹೂರಣವನ್ನು ಸತ್ವಯುತವಾಗಿಯೂ, ಉಪಯುಕ್ತವಾಗಿಯೂ ತುಂಬಬೇಕು. ಈ ನಿಟ್ಟಿನಲ್ಲಿ ನಮ್ಮ ಶಿಕ್ಷಕ ಸಮುದಾಯವು ಭಾಗಿಯಾಗುತ್ತಿದೆಯಾದರೂ ಶಿಕ್ಷಕಿಯರ ಪಾತ್ರ ಸಮಾಧಾನಕರವೆನಿಸುವಷ್ಟು ಇಲ್ಲವೆಂಬುದೂ ಕಹಿಸತ್ಯ.

ಶಿಕ್ಷಕ ಕ್ಷೇತ್ರದಲ್ಲಿ ಎಂದಿನಿಂದಲೂ ಹೆಚ್ಚಿನವರು ಮಹಿಳೆಯರೇ ಆಗಿರುವುದು ಸಂತಸದ ಮತ್ತು ಹೆಮ್ಮೆಯ ಸಂಗತಿ. ಆದರೆ, ಹಲವು ರೀತಿಯಲ್ಲಿ ಅವರು ಎದುರಿಸುತ್ತಿರುವ ಸಮಸ್ಯೆಗಳು ಕೂಡ ಅಲಕ್ಷಿಸುವಂತಹುದಲ್ಲ. ಮನೆಯ ಒಳಗೂ, ಹೊರಗೂ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಹಲವು ಬಗೆಯ ಒತ್ತಡಗಳಿಗೆ ಒಳಗಾಗಬೇಕಾದುದು ಸಹಜವೇ, ಆದರೂ ಅದೆಲ್ಲವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಹಲವರ ಸಲಹೆ, ಸೂಚನೆ, ಸಹಕಾರಗಳ ಅಗತ್ಯವೂ ಇರುತ್ತದೆ. ಇದಕ್ಕೆಲ್ಲ 'ಶಿಕ್ಷಕ ಸಮಾಚಾರ' ವೇದಿಕೆಯಾಗುತ್ತದೆ. ಹಾಗೇ ಶಿಕ್ಷಕಿಯರಲ್ಲಿನ ಪ್ರತಿಭಾ ವಿಕಾಸಕ್ಕೆ ಕೂಡ ಇದನ್ನು ಬಳಸಿಕೊಳ್ಳಬಹುದು. ಅಂತಯೇ ಪ್ರಸ್ತುತ ಸಂಚಿಕೆಯಿಂದಲೇ ಇದರಲ್ಲಿ ಮಹಿಳಾ ವಿಭಾಗವೊಂದನ್ನು ಪ್ರಾರಂಭಿಸುತ್ತಿರುವುದನ್ನು ತಿಳಿಸಲು ಸಂತೋಷಿಸುತ್ತಿದ್ದೇವೆ. ನಿರ್ದಿಷ್ಟ ಬರಹಗಳಿಗೆ ಪೂರ್ವಭಾವಿಯಾಗಿ ಈ ಸಂಚಿಕೆಯಲ್ಲಿ ಶಿಕ್ಷಕಿಯರಿಂದ ಲೇಖನಗಳನ್ನು ಆಹ್ವಾನಿಸುವುದರೊಂದಿಗೆ ಈ ವಿಭಾಗದ ಧ್ಯೇಯೋದ್ದೇಶಗಳನ್ನು ಕೂಡ ಇಲ್ಲಿ ನೀಡಲಾಗುತ್ತಿದೆ.

ಮಕ್ಕಳಿಗೆ ತಾಯಿಯೇ ಮೊದಲ ಗುರುವೆಂಬುದು ಆದಿಯಿಂದಲೂ ನಿರೂಪಿತವಾಗಿರುವ ಮಾತು. ಪುರಾಣೇತಿಹಾಸಗಳಲ್ಲಿಯೂ ಇದಕ್ಕೆ ಬಹಳ ನಿದರ್ಶನಗಳನ್ನು ಕಾಣುತ್ತೇವೆ. ಮಹಿಳೆ ಮತ್ತು ಶಿಕ್ಷಣಕ್ಕೆ ಇರುವ ಸಂಬಂಧ ಕಾಲ ಕಾಲಕ್ಕೂ ಗಟ್ಟಿಯಾಗುತ್ತ, ದೃಢವಾಗುತ್ತ ಬಂದಿದೆ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪುರುಷರಿಗಿಂತ ಎಷ್ಟೋ ಭಿನ್ನವಾಗಿ, ವಿಶಿಷ್ಟವಾಗಿ ಮಹಿಳೆ ಆಲೋಚಿಸುವುದರಿಂದ ಆಕೆಯ ಚಿಂತನೆಗಳು, ಅಭಿಪ್ರಾಯಗಳು ತಮ್ಮದೇ ಆದ ಮಹತ್ವವನ್ನು ಹೊಂದಿರುತ್ತದೆ. ಅವೆಲ್ಲ ನಾಲ್ಕು ಮಂದಿಗೆ ತಿಳಿಯುವ ಅವಶ್ಯಕತೆಯಿರುತ್ತದೆ. ಅದು ಸಮಾಜ ಕಲ್ಯಾಣದ ಕಾರ್ಯದಲ್ಲಿ ಉಪಯುಕ್ತವೂ ಆಗುತ್ತದೆ. ಆದುದರಿಂದಲೇ 'ಶಿಕ್ಷಕ ಸಮಾಚಾರ' ಪತ್ರಿಕೆ ಮಹಿಳಾ ವಿಭಾಗವನ್ನು ತನ್ನಲ್ಲಿ ಪ್ರಾರಂಭಿಸುವ ಉದ್ದೇಶವನ್ನು ಹೊಂದಿದ್ದು, ತನ್ನ ಮೌಲ್ಯವನ್ನೂ ಆ ಮೂಲಕ ಹೆಚ್ಚಿಸಿಕೊಳ್ಳುವ ಆಶಯವನ್ನು ಹೊಂದಿದೆ.

ಶಿಕ್ಷಕಿಯರು ತಮ್ಮ ಮೌಲಿಕವಾದ ಬರಹಗಳಿಂದ ಸಹಕರಿಸಬೇಕೆಂದು ಈ ಮೂಲಕ ಕರೆನೀಡಲಾಗಿದೆ. ಚಿಂತನಾತ್ಮಕ ಪ್ರಸಕ್ತ ವಿಚಾರಗಳು, ಶಿಕ್ಷಕಿಯರ ಸಮಸ್ಯೆಗಳು, ಸೌಲಭ್ಯಗಳು, ಜ್ಞಾನಾಭಿವೃದ್ಧಿಗೆ ನೆರವಾಗುವ (ಮಕ್ಕಳಿಗೆ/ಶಿಕ್ಷಕ ಸಮುದಾಯಕ್ಕೆ) ಯಾವುದಾದರೂ ವಿಷಯವಾಗಬಹುದು. ಶಿಕ್ಷಕರು ಎಲ್ಲ ಕಾಲಕ್ಕೂ ವಿದ್ಯಾರ್ಥಿಗಳಾಗಿರಬೇಕೆಂಬ ನುಡಿಮುತ್ತಿದೆಯಲ್ಲವೇ? ಹೀಗೆ, ತಮಗೆ ಸೂಕ್ತವೆನಿಸುವ ಯಾವುದೇ ವಿಷಯವನ್ನು ಒಳಗೊಂಡ ಲೇಖನವನ್ನು ಕಳುಹಿಸಬಹುದು. ಲೇಖನವನ್ನು ಗಮನಿಸಿ ಅಗತ್ಯವೆನಿಸಿದಲ್ಲಿ ಸಣ್ಣ ಪುಟ್ಟ ಬದಲಾವಣೆಯೊಂದಿಗೆ ಅಚ್ಚಿಗೆ ಕಳುಹಿಸುವ ಹೊಣೆಗಾರಿಕೆ ಎಲ್ಲ ಪತ್ರಿಕೆಗಳಲ್ಲಿ ಅನುಸರಿಸುವ ನಿಯಮದಂತೆ ಸಂಪಾದಕರ ವರ್ಗದ್ದಾಗಿರುತ್ತದೆ. ಶಿಕ್ಷಕಿಯರು ಕಳುಹಿಸುವ ಮೌಲಿಕ ಬರಹಗಳಿಗೆ ತಮ್ಮೆಲ್ಲರ ಪ್ರೀತಿಯ 'ಶಿಕ್ಷಕ ಸಮಾಚಾರ' ಪತ್ರಿಕೆ ಹಾರ್ದಿಕ ಆಹ್ವಾನವನ್ನೂ, ಸ್ವಾಗತವನ್ನೂ ನೀಡುತ್ತದೆ.

ನಮಸ್ಕಾರಗಳು.

---

**ತಿದ್ದುಪಡಿ :–** ಡಿಸೆಂಬರ್ 2013 ರ ಸಂಚಿಕೆಯ 10ನೇ ಪುಟದಲ್ಲಿ ಪದಬಂಧದಲ್ಲಿ **ತರಕಾರಿಗಳ ಹೆಸರು**ಗಳನ್ನು ಪತ್ತೆ ಹಚ್ಚಿ ಎಂದಿದೆ. ಅಲ್ಲಿ ತರಕಾರಿ ಬದಲಾಗಿ **ಪ್ರಾಣಿಗಳು** ಎಂದು ಇರಬೇಕು. ಮಾನ್ಯ ಓದುಗರು ಈ ತಿದ್ದುಪಡಿಯನ್ನು ಮಾಡಿಕೊಳ್ಳಬೇಕಾಗಿ ವಿನಂತಿ ಅಚಾತುರ್ಯದಿಂದಾದ ತಪ್ಪಿಗಾಗಿ ವಿಷಾದಿಸುತ್ತೇವೆ.

# ಸ್ವಾಮಿ ವಿವೇಕಾನಂದರ ಶೈಕ್ಷಣಿಕ ವಿಚಾರಗಳು

■ ಶ್ರೀ.ಹೆಚ್.ವಿ. ಶಂಕರ್
ಕಾರ್ಯದರ್ಶಿ, ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಸ್ಥೆ

**ನ**ಮ್ಮ ಪುಣ್ಯಭೂಮಿ ಭಾರತದಲ್ಲಿ ಅನೇಕ ಋಷಿಮುನಿಗಳು ಜನಿಸಿ ನಮ್ಮ ದೇಶದ ಆಧ್ಯಾತ್ಮಿಕ ಸಂಪತ್ತನ್ನು ಬೆಳೆಸಿದ್ದಾರೆ. ಈ ಋಷಿಮುನಿಗಳ ಪರಂಪರೆಯಲ್ಲಿ ಸ್ವಾಮಿ ವಿವೇಕಾನಂದರು ಆಧುನಿಕ ಋಷಿ ಎಂದು ಹೇಳಬಹುದು. ಸಪ್ತಋಷಿಗಳಲ್ಲಿ ಒಬ್ಬ ಋಷಿಯು ಭೂಮಿಯಲ್ಲಿ ನರೇಂದ್ರ – ಮುಂದೆ ಸ್ವಾಮಿ ವಿವೇಕಾನಂದರಾಗಿ ಅವತರಿಸಿದ. ಅಂತಹ ಅದ್ಭುತ ಹಿನ್ನೆಲೆಯಿಂದ ಬಂದಂತಹ ಸ್ವಾಮೀಜಿಯವರು ದ್ರಷ್ಟಾರರು, ಸಮಾಜ ಪರಿವರ್ತಕರು, ಶೈಕ್ಷಣಿಕ ಪ್ರಭೃತಿಗಳು. ಹೀಗೆ ಹಲವಾರು ಗುಣವಾಚಕಗಳನ್ನು ಸ್ವಾಮಿಜಿಯವರಿಗೆ ಹೇಳಬಹುದು. ಭವ್ಯ ಭಾರತ ನಿರ್ಮಾಣದ ಬಗ್ಗೆ ಅವರು ಕಂಡ ಕನಸಿನಲ್ಲಿ ಮುಖ್ಯವಾಗಿ ನಮ್ಮ ಶಿಕ್ಷಣ ಪದ್ಧತಿಯ ಬಗ್ಗೆ ಚಿಂತನೆ ಮಾಡಿ ಭಾರತದ ಭವ್ಯತೆಗೆ ಬೇಕಾಗಿರುವ ಶಿಕ್ಷಣದ ಬಗ್ಗೆ ತಮ್ಮ ಆಲೋಚನೆಗಳನ್ನು ನೀಡಿದ್ದಾರೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿದಾಗ ನಮ್ಮ ಭಾರತವು ಭವ್ಯವಾಗಿ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ.

ಸ್ವಾಮೀಜಿಯವರ ಸಮಯದಲ್ಲಿ ಭಾರತವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಆಗ ಬ್ರಿಟಿಷರಿಗೆ ಬೇಕಾಗಿದ್ದು ಅವರ ಆದೇಶಗಳನ್ನು ಪಾಲಿಸಿ ಅವರಿಗೆ ಗುಲಾಮರಂತೆ ವರ್ತಿಸುವ 'ಜೀ ಹುಕುಂ' ಮಾದರಿಯ ಗುಮಾಸ್ತರುಗಳು. ಅದಕ್ಕೆ ಅಗತ್ಯವಾದ ಆಂಗ್ಲ ವಿದ್ಯಾಭ್ಯಾಸ ಪದ್ಧತಿಯನ್ನು ಅವರು ಭಾರತದ ಮೇಲೆ ಹೇರಿದರು. ಆ ಪದ್ಧತಿಯನ್ನು ಕಟುವಾಗಿ ಟೀಕಿಸಿದ ಸ್ವಾಮಿಜಿಯವರು 'ಈಗಿನ ಶಿಕ್ಷಣ ಮನುಷ್ಯರನ್ನು ನಿರ್ಮಾಣ ಮಾಡುತ್ತಿಲ್ಲ. ಒಬ್ಬ ವಿದ್ಯಾವಂತ ವ್ಯಕ್ತಿ ಎನಿಸಿಕೊಂಡವನು ಹೇಳುವುದು ನಮ್ಮ ತಂದೆಗೆ ಬುದ್ಧಿಯಿಲ್ಲ. ನಮ್ಮ ತಾತ, ಮುತ್ತಾತಂದಿರು ಮೂರ್ಖರು ಎಂಬುದಾಗಿ. ಭಾರತೀಯ ಸಂಸ್ಕೃತಿಯನ್ನು ನಾಶ ಮಾಡುವ ವಿದ್ಯಾಭ್ಯಾಸ ನಮಗೆ ಬೇಕಾಗಿಲ್ಲ' ಎಂದು ಅವರು ಹೇಳಿದರು. ಹಾಗಾದರೆ ಭವ್ಯಭಾರತ ನಿರ್ಮಾಣಕ್ಕೆ ಬೇಕಾಗಿರುವ ವಿದ್ಯಾಭ್ಯಾಸ ಎಂತಹುದು? ಅದು ಮಾನವ ನಿರ್ಮಾಪಕವಾಗಿರಬೇಕು. ಒಬ್ಬ ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡಬೇಕು. ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾಗಬೇಕು, ಚಾರಿತ್ರ್ಯ ನಿರ್ಮಾಪಕವಾಗಿರಬೇಕು. ಕೇವಲ ಗಿಣಿಮರಿಯಂತೆ ಬಾಯಿಪಾಠ ಮಾಡಿ ಒಪ್ಪಿಸಿ,ಇಡೀ ಜೀವನ ಅದನ್ನು ವಾಂತಿ ಮಾಡುವಂಥಹ ವಿದ್ಯಾಭ್ಯಾಸ ಬೇಕಿಲ್ಲ ಎಂದರು. ಬರೀ ಒಣ ಜ್ಞಾನವೇ ವಿದ್ಯೆ ಎಂದೆನಿಸಿದರೆ ಇಂದಿನ ಎಲ್ಲಾ ಗ್ರಂಥಾಲಯಗಳೇ ಮೇಧಾವಿಗಳು ಎಂದೆನಿಸಿಕೊಳ್ಳುತ್ತವೆ.

ನಿಜವಾದ ವಿದ್ಯಾವಂತ ವ್ಯಕ್ತಿಯಾದವನು ಯಾವುದಾದರೊಂದು ವಿಚಾರ ಅಥವಾ ಆದರ್ಶವನ್ನು ಇಟ್ಟುಕೊಂಡು ಅದನ್ನು ಸಾಧಿಸಲು ಸರ್ವ ಪ್ರಯತ್ನ ಮಾಡಬೇಕು. ಇಂಥಹ ಆದರ್ಶ ಪರಿಪಾಲಕರಾದ, ನಚಿಕೇತನ ಶ್ರದ್ಧೆ ಇರುವ ಕೇವಲ 10 ಮಂದಿ ಯುವಕರನ್ನು ನನಗೆ ಕೊಡಿ. ನಾನು ಇಡೀ ಪ್ರಪಂಚವನ್ನೇ ಅಲ್ಲೋಲ ಕಲ್ಲೋಲ ಮಾಡಬಲ್ಲೆ ಎಂದು ಸ್ವಾಮಿಜಿಯವರು ಹೇಳಿದರು. ಅದರಂತೆಯೇ ಹಲವಾರು ಕಡೆ ಯುವಕರನ್ನು ಹುರಿದುಂಬಿಸಿದರು. ಅವರು ಪ್ರತಿ ಹಳ್ಳಿಗೂ ಹೋಗಿ ಅಲ್ಲಿ ಭೂಪಟ ತೋರಿಸಿ, ಮಾಯಾಲಾಂದ್ರದ ಸಹಾಯದಿಂದ ಜನಗಳಿಗೆ ವಿದ್ಯೆ ನೀಡಿ ಎಂದು ಕರೆ ನೀಡಿದರು. ಅವರ ಪ್ರಕಾರ 'Education is the Panacea for all ills'–– ಎಲ್ಲಾ ದುಃಖ, ದುಮ್ಮಾನ, ದುರಿತಗಳಿಗೂ ಶಿಕ್ಷಣವೇ ಸಿದ್ಧೌಷಧ. ಅದಿಲ್ಲದಿದ್ದರೆ ಸರ್ವನಾಶ ಎಂದು ಹೇಳುತ್ತಿದ್ದರು.

ಬರೀ ಬೌದ್ಧಿಕ ಶಿಕ್ಷಣ ಮಾತ್ರವಲ್ಲದೆ ದೈಹಿಕ ಶಕ್ತಿಯನ್ನೂ ಬೆಳೆಸಿಕೊಳ್ಳಬೇಕೆಂದು ಹೇಳಿದರು. 'A Sound mind in a sound body'– ದೃಢ ಶರೀರವುಳ್ಳ ಯುವಕರಾಗಿ, ಕಾಲ್ಚೆಂಡಿನಂಥ ಕ್ರೀಡೆಗಳಲ್ಲಿ ತೊಡಗಿ. ಆಶಿಷ್ಟರಾಗಿ, ದೃಢಿಷ್ಟರಾಗಿ, ಬಲಿಷ್ಠರಾಗಿ ಎಂದು ಯುವಕರಿಗೆ ಅವರು ಕರೆ ನೀಡಿದರು. ಮಹಿಳೆಯರ ಶಿಕ್ಷಣದ ಬಗೆಗೂ ಸ್ವಾಮಿಜಿಯವರ ಕಾಳಜಿ ಅಪಾರವಾಗಿದ್ದಿತು. ನಮ್ಮ ಸಂಸ್ಕೃತಿಯಲ್ಲಿ ಮೊದಲು 'ಮಾತೃ ದೇವೋ ಭವ'– ತಾಯಿಯೇ ದೇವರು, ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ ಎಂಬ ಮಾತಿನಂತೆ ಓರ್ವ ಮಹಿಳೆ ವಿದ್ಯಾವಂತಳಾದರೆ ಅವಳಿಂದ ಇಡೀ ಕುಟುಂಬ, ಅವರ ಮುಂದಿನ ಪೀಳಿಗೆಗಳು ವಿದ್ಯಾವಂತರಾಗುತ್ತಾರೆ, ಸುಸಂಸ್ಕೃತರಾಗುತ್ತಾರೆ. ಆದ್ದರಿಂದ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂಬುದು ಸ್ವಾಮಿಜಿಯವರ ನಿಲುವಾಗಿದ್ದಿತು. ಅದಕ್ಕಾಗಿಯೇ ಅವರು ತಮ್ಮ ಪ್ರಿಯ ಶಿಷ್ಯೆ ಸೋದರಿ ನಿವೇದಿತ ಭಾರತದ ಸೇವೆ ಮಾಡುವುದಕ್ಕೆ ತಾವು ಬರುವುದಾಗಿ ಹೇಳಿದಾಗ, ಭಾರತೀಯ ಹೆಣ್ಣುಮಕ್ಕಳ

(15ನೇ ಪುಟಕ್ಕೆ.....)

3ನೇ ಪುಟದಿಂದ...

**ಮುಂಬೈ ಜ್ಞಾನ ಯಾತ್ರೆ**

ಸಂಸ್ಕಾರವಿದೆಯೋ ಆ ಸಮಾಜವನ್ನು ಸುಸಂಸ್ಕೃತ ಸಮಾಜವೆಂದು ಕರೆಯಬಹುದು. ಮಾ. ಇಂದುಮತಿ ಕಾಟ್ಕರೆಯವರ ವಿಚಾರಧಾರೆ, ಅವರ ಸರಳತೆ, ಮಾತಿನಲ್ಲಿರುವ ಅವರ ನಿರ್ಗಗಳತೆ ನನ್ನನ್ನು ಆಕರ್ಷಿಸಿತು.

ನಂತರ 12.15 ರಲ್ಲಿ ಉಚ್ಚವರ್ಗ, ಪ್ರೌಢಶಾಲಾ ವರ್ಗ, ಪ್ರಾಥಮಿಕ ವರ್ಗಕ್ಕನುಗುಣವಾಗಿ ನಮ್ಮನ್ನೆಲ್ಲಾ ವಿಭಜಿಸಿ ಅವರವರ ವರ್ಗದಲ್ಲಿರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರದ ಬಗ್ಗೆ ಹಿರಿಯ ಮಹಿಳಾ ಸದಸ್ಯರೆಲ್ಲರೂ ಚರ್ಚಿಸಿದರು. ನಂತರ ಮಾ. ಇಂದುಮತಿ ಕಾಟ್ಕರೆ ಯವರು ಕುಟುಂಬ ಪ್ರಬೋಧನೆ ಎಂಬ ವಿಚಾರವಾಗಿ ಮಾತನಾಡಿದರು. ಅವರು ತಮ್ಮ ಭಾಷಣದಲ್ಲಿ ಹಿಂದಿನ ಕುಟುಂಬಗಳು ಹಾಗೂ ಇಂದಿನ ಕುಟುಂಬಗಳಿಗಿರುವ ವ್ಯತ್ಯಾಸವೇನು? ಹೇಗೆ ನಾವು ನಮ್ಮ ಕುಟುಂಬವನ್ನು ನಿಭಾಯಿಸಬೇಕು ? ಮಕ್ಕಳ ಪಾಲನೆ ಪೋಷಣೆ ಹೇಗೆ ಮಾಡಬೇಕು ? ನಮ್ಮ ಕರ್ತವ್ಯವನ್ನು ನಿಭಾಯಿಸುತ್ತಾ ಕುಟುಂಬವನ್ನು ಹೇಗೆ ನಿಭಾಯಿಸಬೇಕೆಂಬುದರ ಬಗ್ಗೆ ಸವಿವರ ನೀಡಿದರು.

ನಂತರ ಮಹಿಳಾ ಸಚಿವರು ಎಲ್ಲಾ ರಾಜ್ಯದಿಂದ ಬಂದ ಎಲ್ಲರಿಗೂ ಹಾಗೂ ಹಿರಿಯರಿಗೆ ಧನ್ಯವಾದವನ್ನು ಹೇಳುತ್ತಾ 04.00 ಗಂಟೆಗೆ ಕಾರ್ಯಕ್ರಮವನ್ನು ಮುಕ್ತಾಯ ಮಾಡಿದರು.

**ಶ್ರೀಮತಿ ಮಮತಾ ಡಿ.ಕೆ.**
ಸಹಶಿಕ್ಷಕಿ ಮತ್ತು ರಾಮನಗರ ಜಿಲ್ಲಾ ಮಹಿಳಾ ಪ್ರತಿನಿಧಿ,
ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ, ಕನಕಪುರ ತಾ॥, ರಾಮನಗರ ಜಿಲ್ಲೆ.

## ವಿದ್ಯಾರ್ಥಿ ಮಿತ್ರ – 2 ರ ಉತ್ತರ

**1. ರಸಪ್ರಶ್ನೆ : ಅ) ಅಕ್ಟೋಬರ್ 10 ; ಆ) ಆಗಸ್ಟ್ 17; ಇ) ಜನವರಿ 4 ; ಈ) ಜುಲೈ 4 ; ಉ) ಏಪ್ರಿಲ್ 29**

**2. ಇವರು ಯಾರು ಬಲ್ಲಿರಾ ? 1) ಬಸವಣ್ಣ ; 2) ಅಕ್ಕಮಹಾದೇವಿ ; 3. ಸರ್ವಜ್ಞ; 4. ಅಲ್ಲಮಪ್ರಭು**

**3. ಈ ಒಗಟುಗಳನ್ನು ಬಿಡಿಸಬಲ್ಲಿರಾ ?**
**1. ಮೂಗು ; 2. ಒಲೆ ; 3. ಗೇರುಬೀಜ ; 4.ಈರುಳ್ಳಿ ; 5. ಬಲೆ**

**4. ಪದಬಂಧ : ಆಡು, ಸಿಂಹ, ಹದ್ದು, ಕೋಳಿ, ಹಲ್ಲಿ, ನವಿಲು, ಇಲಿ, ಬೆಕ್ಕು, ಚಿರತೆ, ಕೋಣ, ಆಕಳು, ಕತ್ತೆ, ಸಾರಂಗ, ಹಂಸ, ಎಮ್ಮೆ, ಗೂಬೆ**

5ನೇ ಪುಟದಿಂದ...

**ರಾಷ್ಟ್ರ ಜಾಗೃತಿಯ**

ಪ್ರಮಾಣದಲ್ಲಿ ಪ್ರಕಟಗೊಂಡಿತ್ತು. ಮಾತೃಭೂಮಿಯ ಕುರಿತಾದ ಅವರ ಪ್ರೀತಿಯ ಬಗ್ಗೆ ಭಗಿನಿ ನಿವೇದಿತಾ ಹೀಗೆ ಉದ್ಗರಿಸುತ್ತಾರೆ. 'ಭಾರತವೇ ಅವರ ಎದೆಬಡಿತವಾಗಿತ್ತು. ಭಾರತವೇ ಅವರ ನಾಡಿಮಿಡಿತವಾಗಿತ್ತು. ಭಾರತವೇ ಅವರ ಹಗಲುಗನಸೂ ಆಗಿತ್ತು. ಭಾರತವೇ ಅವರ ರಾತ್ರಿಯ ಕರಾಳಕನಸೂ ಆಗಿತ್ತು... ಅವರೇ ಪೂರ್ಣವಾಗಿ ಭಾರತವಾಗಿ ಬಿಟ್ಟಿದ್ದರು. ರಕ್ತಮಾಂಸಗಳಿಂದ ಕೂಡಿದ ಭಾರತದ ಪ್ರತಿರೂಪವೇ ಅವರಾಗಿಬಿಟ್ಟಿದ್ದರು. ಅವರೇ ಭಾರತ. ಅದರ ಆಧ್ಯಾತ್ಮಿಕತೆ, ಪಾವಿತ್ರ್ಯತೆ, ಅರಿವು, ಶಕ್ತಿ, ದರ್ಶನ ಮತ್ತು ಭವಿಷ್ಯಗಳ ಸಂಕೇತವಾಗಿದ್ದ ಅವರೇ ನೈಜ ಭಾರತ' (complete works of Nivedita, Vol.1,p.375)

ಪ್ರತಿಯೊಬ್ಬ ಭಾರತೀಯನನ್ನೂ, ಅಸ್ಪೃಶ್ಯರೆಂದು ಕರೆಸಿಕೊಳ್ಳುವವರನ್ನೂ, ತಮ್ಮ ಸ್ವಂತ ಸಹೋದರರಂತೆ ಕಾಣಬೇಕೆಂದು ಎಲ್ಲಾ ಭಾರತೀಯರಿಗೆ ಕರೆಕೊಟ್ಟ ಮೊಟ್ಟಮೊದಲ ಭಾರತೀಯರೇ ಸ್ವಾಮಿ ವಿವೇಕಾನಂದರು. ಅವರು ತಮ್ಮ ವೀರ್ಯವತ್ತಾದ ಮಾತುಗಳನ್ನು ಹೀಗೆ ಹೇಳುತ್ತಾರೆ. "ಓ ಭಾರತವೇ, ಅಂತ್ಯಜರು, ಮೂಢರು, ದರಿದ್ರರು, ನಿರಕ್ಷಕುಕ್ಷಿಗಳು ಚಂಡಾಲರು ಮತ್ತು ಚಮ್ಮಾರರು– ಎಲ್ಲರೂ ನಿಮ್ಮ ರಕ್ತಬಂಧುಗಳಾದ ಸಹೋದರರು! ವೀರಾತ್ಮನೇ, ಧೀರರಾಗಿ, ನೆಚ್ಚುಗೆಡದಿರಿ. ಭಾರತೀಯರು ನಾವು ಎಂದು ಹೆಮ್ಮೆ ತಾಳಿ, ಸಾರಿಹೇಳಿ, ಭಾರತೀಯರು ನಾವು, ಭಾರತೀಯರೆಲ್ಲ ನಮ್ಮ ಸಹೋದರರು. ಸಾರಿ ಹೇಳಿ, ಮೂರ್ಖ ಭಾರತೀಯರೆಮ್ಮ ಸಹೋದರರು, ಪಂಚಮ ಭಾರತೀಯರೆಮ್ಮ ಸಹೋದರರು" (ವಿದ್ಯುತ್ ವಾಣಿ).

ಸ್ವಾಮಿ ವಿವೇಕಾನಂದರನ್ನು ಭಾರತೀಯ ರಾಷ್ಟ್ರೀಯತೆಯ ಜನಕರೆಂದು ಕೊಂಡಾಡಿದರೂ, ಆ ರಾಷ್ಟ್ರೀಯತೆಯ ರಾಜಕೀಯ ದೃಷ್ಟಿಯದಲ್ಲ. ಸ್ವಾಮೀಜಿ ರಾಷ್ಟ್ರೀಯ ಪ್ರಜ್ಞೆಯನ್ನು, ರಾಷ್ಟ್ರೀಯ ಐಕ್ಯಮತವನ್ನು ಹುಟ್ಟುಹಾಕಲು ಪ್ರಯತ್ನಪಟ್ಟರು. ಕೇವಲ ವಿದ್ಯಾವಂತ ಮೇಲ್ವರ್ಗದ ಜನರಿಗೆ ಮಾತ್ರ ಸೀಮಿತವಾಗದೆ, ಅದಕ್ಕೆ ಬದಲಾಗಿ, ತುಳಿಯಲ್ಪಟ್ಟ ಜನಸಾಮಾನ್ಯರನ್ನೂ ಒಳಗೊಂಡ ಸಾಂಸ್ಕೃತಿಕ ಏಕತೆಯನ್ನು ಉಂಟುಮಾಡಲು ಪ್ರಯತ್ನಿಸಿದರು. ಭಾರತದ ಯಾವ ಗುರುಪುಂಗವರೂ ಈ ಕಾರ್ಯವನ್ನು ಹಿಂದೆ ಮಾಡಿರಲಿಲ್ಲ.

**ಕೃಪೆ: ವಿವೇಕಪ್ರಭ– ಜನವರಿ–2014**

# ನಮ್ಮ ನೆಚ್ಚಿನ ನಾಗಭೂಷಣ

■ ಶ್ರೀ ಕೃ. ನರಹರಿ
ಮಹಾ ಪೋಷಕರು, ಕ.ರಾ.ಮಾ.ಶಿ.ಸಂ.
ಸಂರಕ್ಷಕರು, ಎ.ಬಿ.ಆರ್.ಎಸ್.ಎಂ.



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪೋಷಕರಲ್ಲಿ ಒಬ್ಬರಾದ ಶ್ರೀ ಹೆಚ್ಚೆನ್ನಾರ್ ಅವರು 4.1.2014 ರಂದು 70 ವಸಂತಗಳನ್ನು ಪೂರೈಸಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಮಹಾಪೋಷಕರಾದ ಶ್ರೀ ಕೃ. ನರಹರಿಯವರ ಈ ಲೇಖನವನ್ನು ಪ್ರಕಟಿಸಲಾಗುತ್ತಿದೆ.

ಬಾಲ್ಯದಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶುಭ್ರ ಸಂಸ್ಕಾರ ಪಡೆಯುವ ಸೌಭಾಗ್ಯ ಶ್ರೀ ನಾಗಭೂಷಣರದು. ಶಿಕ್ಷಣ ಮುಗಿದ ನಂತರ ಸಂಘದ ಪ್ರಚಾರಕರಾಗಿ ಪೂರ್ಣ ಸಮಯ ರಾಷ್ಟ್ರ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಅವರ ವೃತ್ತಿ ಜೀವನ ಬೆಂಗಳೂರು ಚೆನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಪ್ರಾರಂಭ. 1975ರಲ್ಲಿ ಇಂದಿರಾಗಾಂಧಿ ದೇಶದ ಮೇಲೆ ತುರ್ತುಸ್ಥಿತಿ ಹೇರಿದಾಗ ಸರ್ಕಾರದ ವಕ್ರದೃಷ್ಟಿ ಸಂಘಪ್ರೇರಿತ ಎಲ್ಲ ಸಂಸ್ಥೆಗಳ ಮೇಲೂ ಬಿದ್ದಂತೆ ಈ ಶಾಲೆಯ ಮೇಲೂ ಬಿತ್ತು. ಜನಸೇವಾ ವಿದ್ಯಾಕೇಂದ್ರದ ಇಡೀ ಆವರಣವನ್ನು ಸರ್ಕಾರ ಸ್ವಾಧೀನಕ್ಕೆ ಪಡೆದುಕೊಂಡಿತು. ಅಲ್ಲಿ ಯಾವ ಚಟುವಟಿಕೆಯೂ ನಡೆಯದಂತೆ ಮಾಡಿತು. ಅಲ್ಲಿನ ವಿದ್ಯಾರ್ಥಿಗಳು/ ಅಧ್ಯಾಪಕರು, ಅನ್ಯ ಕೆಲಸಗಾರರು ತಮ್ಮ ಶಿಕ್ಷಣ, ಕೆಲಸ ಕಳೆದುಕೊಳ್ಳಬೇಕಾಯಿತು.

ನಂತರ ಶ್ರೀ ನಾಗಭೂಷಣರಾವ್ ಬೆಂಗಳೂರು ಬಸವನಗುಡಿ ನ್ಯಾಷನಲ್ ಪ್ರೌಢಶಾಲೆಗೆ ಅಧ್ಯಾಪಕರಾಗಿ ಸೇರಿದರು. ಪ್ರಾರಂಭದಲ್ಲಿ ಅಲ್ಲಿನ ಆಡಳಿತ ಮಂಡಳಿಗೆ ಇವರ ನೇಮಕಾತಿ ಬಗ್ಗೆ ಅಳುಕು ಇದ್ದರೂ ಕೆಲವೇ ಸಮಯದ ನಂತರ ಅವರ ಕಾರ್ಯನಿಷ್ಠೆ, ಶಿಕ್ಷಕ ವೃತ್ತಿಯ ಬಗ್ಗೆ ಇದ್ದ ಆಸಕ್ತಿ ಮತ್ತು ಬದ್ಧತೆ, ವಿದ್ಯಾರ್ಥಿಗಳಿಂದ ಗಳಿಸಿದ ಅಭಿಮಾನಗಳ ಕಾರಣ ಶ್ರೀ ಹೆಚ್ಚೆನ್ನಾರ್ ಶಾಲೆಗೆ ಒಂದು ಆಸ್ತಿ ಎಂಬುದು ಅರಿವಾಯಿತು. ಶ್ರೀ ಹೆಚ್.ಎನ್.ಆರ್ ಗಣಿತ ಮತ್ತು ವಿಜ್ಞಾನ ಶಿಕ್ಷಕರಾಗಿ ವಿದ್ಯಾರ್ಥಿಗಳ ಗೌರವಕ್ಕೆ ಪಾತ್ರರಾದರು. ಇವರು ಶಾಲೆಯ ವಿದ್ಯಾರ್ಥಿಗಳಲ್ಲಿ, ದೇಶಭಕ್ತಿ ರಾಷ್ಟ್ರಾಭಿಮಾನಗಳನ್ನು ಬೆಳೆಸುವ ದೃಷ್ಟಿಯಿಂದಲೂ ಮುಂದೆ. ಸ್ವಾತಂತ್ರ್ಯೋತ್ಸವದ ದಿನ ಶ್ರೀ ಹೆಚ್. ನರಸಿಂಹಯ್ಯನವರಿಗೂ ಅಸಾಧ್ಯವೆನಿಸಿದ್ದ ಪ್ರಭಾತ್ ಫೇರಿಯನ್ನು ಯಶಸ್ವಿಯಾಗಿ ನಡೆಸಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು. ಶ್ರೀ ಹೆಚ್. ಎನ್ ಗೆ ಆಶ್ಚರ್ಯವಾಗುವಂತೆ ಕಾರ್ಯಕ್ರಮ ಸಂಘಟಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಕಲ್ಪನೆ ಮಾಡಿ ಪ್ರಕಟಿಸಿದ 'ವಿಜ್ಞಾನ ಪ್ರಪಂಚಕ್ಕೆ ಭಾರತದ ಕೊಡುಗೆ' ಈ ಭಿತ್ತಿ ಪತ್ರಗಳ ತಯಾರಿಕೆಯಲ್ಲಿ ಶ್ರೀ ವಿ. ನಾಗರಾಜ್‌ರೊಡನೆ ಕೈಜೋಡಿಸಿದವರಲ್ಲಿ ಇವರೂ ಒಬ್ಬರು.

ಮಕ್ಕಳಿಗೆ ನೈಜ ಇತಿಹಾಸವನ್ನು ಪ್ರೇರಣೆ ಬರುವಂತೆ ಬೋಧಿಸಬೇಕೆಂಬ ಕಳಕಳಿ ಇವರದು. ಇದಕ್ಕಾಗಿ **'ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ಇತಿಹಾಸ ಬೋಧನೆ'** ಎಂಬ ವಿಷಯದ ಮೇಲೆ ಇತಿಹಾಸ ಶಿಕ್ಷಕರಿಗೆ ವಿಚಾರ ಸಂಕಿರಣ ಏರ್ಪಡಿಸಿ ಈ ಕ್ಷೇತ್ರದಲ್ಲಿ ಆಳವಾಗಿ ಅಭ್ಯಾಸ ಮಾಡಿರುವ ಶ್ರೀ ಎಸ್.ಆರ್ ರಾವ್, ಡಾ। ಸೂರ್ಯನಾಥ್ ಕಾಮತ್ ಇತ್ಯಾದಿ ತಜ್ಞರಿಂದ ಮಾರ್ಗದರ್ಶನ ನೀಡುವಂತೆ ಮಾಡಿದ್ದು ಶ್ರೀ ನಾಗಭೂಷಣರ ಕಲ್ಪನೆಯೇ. ನಿಧಾನ ಕಲಿಕೆ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ತರಗತಿಗಳನ್ನು ಯಶಸ್ವಿಯಾಗಿ ನಡೆಸಲು ಅಧ್ಯಾಪಕರಿಗೆ ನಿರಪೇಕ್ಷ ಸೇವಾ ಭಾವನೆಯಿಂದ ಸಹಕರಿಸಲು ಪ್ರೇರಣೆ ನೀಡಿ ಆ ಕಾರ್ಯಕ್ರಮದ ನೇತೃತ್ವ ವಹಿಸಿ ವಿದ್ಯಾರ್ಥಿಗಳ ಆತ್ಮ ವಿಶ್ವಾಸ ಹೆಚ್ಚುವಂತೆ ಮಾಡಲು ಶ್ರೀ ಹೆಚ್.ಎನ್.ಆರ್ ಪ್ರಯತ್ನ ಅನುಕರಣೀಯ. ಅದೇ ರೀತಿ ಆಕಾಶವಾಣಿಯ ಎಫ್.ಎಂ. ನಲ್ಲಿ ವಿದ್ಯಾರ್ಥಿಗಳಿಗೆ ಪಾಠ ಬೋಧಿಸುವ ಪರಂಪರೆ ಹಾಕಿದವರೂ ಇವರೇ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ನಡೆಸಿಕೊಂಡು ಬಂದಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶಾಲಾ ಪ್ರಥಮಿಗರಿಗೆ ಪುರಸ್ಕರಿಸುವ ಕಾರ್ಯಕ್ರಮ ಬರುಬರುತ್ತಾ ಶಿಕ್ಷಕ ಸಂಘದ ಹೆಮ್ಮೆಯ ಕಾರ್ಯಕ್ರಮವಾಗಿ ಪರಿವರ್ತನೆಯಾಗಲು ಶ್ರೀ ನಾಗಭೂಷಣ್‌ರ ಪಾತ್ರ, ಚಿಂತನೆ, ಪರಿಶ್ರಮ, ಅಪಾರ. ಪ್ರಾರಂಭದಲ್ಲಿ ಕೇವಲ ರ್‍ಯಾಂಕ್ ವಿಜೇತರಿಗಿದ್ದ ಈ ಕಾರ್ಯಕ್ರಮ ನಂತರ ಶಾಲಾ ಪ್ರಥಮಿಗರು, ಅಂಗವಿಕಲರು,

(10ನೇ ಪುಟಕ್ಕೆ.....)

9ನೇ ಪುಟದಿಂದ... **ನಮ್ಮ ನೆಚ್ಚಿನ**

ಹೆಚ್ಚು ಅಂಕಗಳಿಸಿದ ಶಿಕ್ಷಕರ ಮಕ್ಕಳು, ಸಾಧನೆ ಮಾಡಿದ ಕ್ರೀಡಾಪಟುಗಳು ಇತ್ಯಾದಿ ಒಂದೊಂದಾಗಿ ಜೋಡಣೆಯಾಗುತ್ತಾ ಕರ್ನಾಟಕದಲ್ಲಿ ಮತ್ತಾರೂ ಕಲ್ಪನೆ ಮಾಡದ ಅತ್ಯಂತ ಪ್ರತಿಷ್ಠೆಯ ಕಾರ್ಯಕ್ರಮವಾಗಿ ಪರಿವರ್ತಿತವಾಗಲು ಇವರದು ಪ್ರಮುಖ ಕೊಡುಗೆ.

ಇಷ್ಟಲ್ಲದೆ ವಿದ್ಯಾರ್ಥಿಗಳಲ್ಲಿ ಮೌಲ್ಯ ವರ್ಧನೆ, ದೇಶಭಕ್ತಿ, ಕರ್ತವ್ಯ ನಿಷ್ಠೆ ಇತ್ಯಾದಿ ಗುಣಗಳನ್ನು ಪ್ರೇರೇಪಿಸಬಲ್ಲ ಹೊಸ ಪಠ್ಯಕ್ರಮವನ್ನು ತಯಾರಿಸಬೇಕೆಂಬ ಪ್ರಯತ್ನದಲ್ಲಿ ಕಳಕಳಿಯ ಪಾತ್ರ ಇವರದು. ಈ ಕಾರ್ಯ ಮಾಡಬಲ್ಲ ದೂರದೃಷ್ಟಿ ಇರುವ, ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪಳಗಿರುವ ಶ್ರೇಷ್ಠ ಶಿಕ್ಷಕರು ಚಿಂತನೆಯ ಹೆಜ್ಜೆ ಇಡುವಲ್ಲಿ ಇವರದು ಪೂರ್ಣ ಸಹಕಾರ.

ಸಮ್ಯಕ್ ದೃಷ್ಟಿ ಚಿಂತನೆ ಇರುವ ಇವರು ಶಿಕ್ಷಕರ ಕ್ಷಮತೆ, ಬದ್ಧತೆಗಳನ್ನು ಹೆಚ್ಚಿಸಲು ಅವಶ್ಯಕವಾದ ಅನೇಕ ವಿಷಯಗಳನ್ನು ವಿಚಾರ ಸಂಕಿರಣ, ಕಮ್ಮಟಗಳಿಗೆ ಸೂಚಿಸಿದ್ದಾರೆ. ಇಷ್ಟೆಲ್ಲ ಗುಣಗಳಿರುವ ಇವರು ತಮ್ಮ ಸರಳ ಸ್ವಭಾವದಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸ್ವತಃ ಪತಿಪತ್ನಿಯರಿಬ್ಬರೂ ಈ ರೀತಿ ಕಾರ್ಯದಲ್ಲಿ ಜೋಡಿಸಿಕೊಂಡು ಶ್ರಮಪಡುತ್ತಿರುವುದು ಅನುಕರಣೀಯ. ಇದೇ ಸಮಾಜೋಪಯೋಗಿ ಸಂಸ್ಕೃತಿಯು ಶ್ರೀಮತಿ ಸೀತಾಲಕ್ಷ್ಮಿ ಮತ್ತು ಶ್ರಿ ನಾಗಭೂಷಣರ ಮಕ್ಕಳು ಮತ್ತು ಅಳಿಯಂದಿರಲ್ಲೂ ನಿರ್ಮಾಣವಾಗಿರುವ ಪ್ರೇರಣೆಯ ಜೀವನ ಇವರ ಇನ್ನೊಂದು ವಿಶೇಷ.

ಶ್ರೀ ನಾಗಭೂಷಣ ಮತ್ತು ಸೀತಾಲಕ್ಷ್ಮಿ ಇವರ ಕುಟುಂಬ ಮತ್ತು ಮನೆ ಅನೇಕ ಸಮಾಜ ಕಾರ್ಯಗಳಿಗೆ, ಸಾಮಾಜಿಕ ಕಾರ್ಯಕರ್ತರಿಗೆ ಆಶ್ರಯ ಹಾಗೂ ಪ್ರೇರಣಾ ಕೇಂದ್ರವಾಗಿದೆ. ಇದು ಇತರ ಕುಟುಂಬಗಳಿಗೂ ಅನುಕರಣೀಯ.

ಈಗ 70 ವಸಂತಗಳನ್ನು ಕಂಡಿರುವ ಶ್ರೀ ಹೆಚ್. ನಾಗಭೂಷಣರಾಯರು ಆರೋಗ್ಯ ಪೂರ್ಣವಾಗಿ ಶತಾಯುಷಿಗಳಾಗಿ ಸಮಾಜಕ್ಕೆ ಶಿಕ್ಷಕರಿಗೆ ಇವರ ಮಾರ್ಗದರ್ಶನ ದೊರೆಯುವಂತಾಗಲೀ ಎಂದು ಸರ್ವಶಕ್ತಿವಂತನಾದ ಪರಮೇಶ್ವರನಲ್ಲಿ ನನ್ನ ಬೇಡಿಕೆ.

ನಾವೆಲ್ಲಾ ಕಾರ್ಯಕರ್ತರೂ ರಾಷ್ಟ್ರಕಾರ್ಯದ ಸಂಕಲ್ಪ ತೊಟ್ಟವರು. ನಾವು ಎದುರಿಸಬೇಕಾಗಿ ಬರುವ ಕಷ್ಟಗಳು, ಅಡ್ಡಿಗಳು, ಮಾನಸಿಕ ಗೊಂದಲಗಳು ಇವುಗಳನ್ನು ದಿಟ್ಟತನದಿಂದ ಎದುರಿಸುತ್ತಾ, ಮಾನಸಿಕ ಸಂತುಲನವನ್ನು ಕಾಪಾಡಿಕೊಂಡು, ಹೊಸ ಪ್ರತಿಭಾವಂತ ಹಾಗೂ ಕ್ಷಮತೆಯುಳ್ಳ ವ್ಯಕ್ತಿಗಳನ್ನು ಜೋಡಿಸಿಕೊಳ್ಳುತ್ತಾ, ಪರಸ್ಪರ ಶಕ್ತಿ ತುಂಬುತ್ತಾ, ಹಿರಿಯರ ಮಾರ್ಗದರ್ಶನದಲ್ಲಿ ನಿರ್ಮಮ ಭಾವದಿಂದ ರಾಷ್ಟ್ರಪುನರ್ ನಿರ್ಮಾಣದ ಏಕೈಕ ಉನ್ನತ ಧ್ಯೇಯದಿಂದ ವಿಶ್ವಾಸದ ಹೆಜ್ಜೆ ಮುಂದಿಡುವಂತೆ ದೇವರು ನಮಗೆಲ್ಲಾ ಶಕ್ತಿ ನೀಡಲಿ ಎಂದು ನನ್ನ ಬೇಡಿಕೆ.

ಶ್ರೀ ನಾಗಭೂಷಣ ಮತ್ತು ಅವರ ಕುಟುಂಬದ ಸದಸ್ಯರು ಸಮಾಜ ಪ್ರೇರಿತ ಕೆಲಸಗಳಲ್ಲಿ ನಿರಂತರವಾಗಿ ತೊಡಗಿ ಇತರರಿಗೂ ಪ್ರೇರಣೆ ಕೊಡುತ್ತಿರಲಿ ಮತ್ತು ಪರಮಾತ್ಮನು ಇವರಿಗೆ ಆಯಸ್ಸು ಆರೋಗ್ಯ ಭಾಗ್ಯಗಳನ್ನು ಕರುಣಿಸಲಿ ಎಂದು ನನ್ನ ಹೃತ್ಪೂರ್ವಕ ಹಾರೈಕೆ. ■

## ಇವು ನಿಮಗೆ ತಿಳಿದಿರಲಿ :

1. **ರಾಜಾರಾಮ್ ಮೋಹನ್ ರಾಯ್‌ರವರನ್ನು 'ಪುನರುಜ್ಜೀವನದ ಪಿತಾಮಹ' ಎಂದು ಬಣ್ಣಿಸಲಾಗಿದೆ.**
2. **1929 ರಲ್ಲಿ ಕೊಲ್ಕತ್ತಾದಲ್ಲಿ ರಾಜಾರಾಮ ಮೋಹನರಾಯರು ಬ್ರಹ್ಮ ಸಮಾಜವನ್ನು ಸ್ಥಾಪಿಸಿದರು.**
3. **ಇಂಗ್ಲೀಷ್ ಶಿಕ್ಷಣ ಹಾಗೂ ಆಧುನಿಕ ವಿಜ್ಞಾನವು ಭಾರತದ ನವೀಕರಣಕ್ಕೆ ಅವಶ್ಯಕವೆಂದು ರಾಜಾರಾಮ್ ಮೋಹನ್‌ರಾಯರು ಸಾರಿದರು.**
4. **ಜಾತೀಯತೆ, ಶೋಷಣೆ, ಬಾಲ್ಯವಿವಾಹ, ಜಾತಿಪದ್ಧತಿಗಳನ್ನು ವಿರೋಧಿಸಿದರು. ಸ್ತ್ರೀ ಪುರುಷರ ಸಮಾನತೆಗೆ ರಾಜಾರಾಮ ಮೋಹನರಾಯರು ಹೋರಾಡಿ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಿದರು.**
5. **ರಾಜಾರಾಮ ಮೋಹನರಾಯರ ನಂತರ ಬ್ರಹ್ಮಸಮಾಜವನ್ನು ದೇವೇಂದ್ರನಾಥ ಠಾಕೂರ್ ಮತ್ತು ಕೇಶವಚಂದ್ರ ಸೇನರು ಮುಂದುವರೆಸಿದರು.**

– **ವಿ. ರಾಜಾ,** ಜಿಲ್ಲಾಧ್ಯಕ್ಷರು, ಬೆಂಗಳೂರು ದಕ್ಷಿಣ

# ಸರ್ಕಾರಕ್ಕೆ ಒಂದು ಮನವಿ

**ವಿಷಯ : ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಅನುದಾನ ರಹಿತ ಸೇವೆಯನ್ನು ವೇತನ, ಪಿಂಚಣಿ, ರಜೆ ಹಾಗೂ ಇತೆ ಎಲ್ಲ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 21–8–2013 ರಂದು ನೀಡಿದ ತೀರ್ಪನ್ನು ಅನುಷ್ಠಾನಗೊಳಿಸಲು ಸರಕಾರಿ ಆದೇಶ ಹೊರಡಿಸುವ ಬಗ್ಗೆ.**

ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 1985 ರಿಂದ 1990ರ ವರೆಗೆ ಸಾವಿರಾರು ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಸಲಾಯಿತು. ಈ ಸಂದರ್ಭದಲ್ಲಿ ನೇಮಕಗೊಂಡ ಶಿಕ್ಷಕರಿಗೆ ಕಾಲ ಕಾಲಕ್ಕೆ ಅನುದಾನದಡಿಯಲ್ಲಿ ಸೇವೆಯನ್ನು ಸಕ್ರಮಗೊಳಿಸಲಾಯಿತು. ಹೀಗೆ ಸಕ್ರಮಗೊಳಿಸುವ ಸಂದರ್ಭದಲ್ಲಿ ಮೊದಲ ಹಂತದ ಶಿಕ್ಷಕರಿಗೆ ಸೇವೆಗೆ ಸೇರಿದ ದಿನಾಂಕದಿಂದ ಅಥವಾ ಹುದ್ದೆಯು ಮಂಜೂರಾದ ದಿನಾಂಕದಿಂದ ಕಾಲ್ಪನಿಕ ವೇತನ ಬಡ್ತಿಯೊಂದಿಗೆ, ವೇತನವನ್ನು ನಿಗದಿಗೊಳಿಸಲಾಯಿತು.

ನಂತರ 1998ರಲ್ಲಿ ಸರ್ಕಾರವು ಹೀಗೆ ಕಾಲ್ಪನಿಕ ವೇತನದೊಂದಿಗೆ ಸಕ್ರಮಗೊಂಡು ಅನುದಾನಕ್ಕೆ ಒಳಪಟ್ಟ ಶಿಕ್ಷಕರು ಪಿಂಚಣಿಗೆ ಅರ್ಜಿ ಸಲ್ಲಿಸಿದಾಗ ಅನುದಾನಕ್ಕೆ ಒಳಪಟ್ಟ ಹಿಂದಿನ ಸೇವಾ ಅವಧಿಯನ್ನು ಕಟಾವುಗೊಳಿಸಿ, ನಿವೃತ್ತಿ ವೇತನವನ್ನು ನಿಗದಿಪಡಿಸಲಾಯಿತು. (ಸಂತ ಅಸೋಸಿಯೇಶನ್ ಸಂಧ್ಯಾ ಕಾಲೇಜು ಮಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದ ವಿ.ಟಿ.ಎಸ್. ಜಯಪಾಲರವರ ಪ್ರಕರಣ ಇದಕ್ಕೆ ಉದಾಹರಣೆಯಾಗಿದೆ.)

ಹೀಗೆ ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶಿಕ್ಷಕರಿಗೆ ಅನ್ಯಾಯವಾದಾಗ, ಶಿಕ್ಷಕರು ನ್ಯಾಯಾಲಯದಲ್ಲಿ ದಾವೆ ಹಾಕುವ ಅನಿವಾರ್ಯತೆ ಬಂದಿತು. ಈ ಅನಿವಾರ್ಯತೆಯ ಹಿನ್ನೆಲೆಯಲ್ಲಿ ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಅನುದಾನರಹಿತ ಸೇವೆಯ ಅವಧಿಯನ್ನು ಎಲ್ಲಾ ಸೌಲಭ್ಯಗಳಿಗೆ ಅಂದರೆ ವೇತನ ನಿಗದಿಪಡಿಸುವಿಕೆ, ಪಿಂಚಣಿ ನಿಗದಿ, ರಜೆ ಹಾಗೂ ಇತ್ಯಾದಿಗಳಿಗೆ ಪರಿಗಣಿಸುವಂತೆ ನ್ಯಾಯ ಕೋರಿ ಹಲವಾರು ಶಿಕ್ಷಕರು ಹಾಗೂ ಶಿಕ್ಷಕೇತರರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ತಂಡೋಪತಂಡವಾಗಿ ರಿಟ್ ಅರ್ಜಿಗಳನ್ನು ಸಲ್ಲಿಸಿದರು. ಅರ್ಜಿದಾರರ ಕೋರಿಕೆಗಳನ್ನು ಮನ್ನಿಸಿದ ಉಚ್ಛ ನ್ಯಾಯಾಲಯದ ಏಕ ಸದಸ್ಯ ಪೀಠ ಮತ್ತು ದ್ವಿ ಸದಸ್ಯ ಪೀಠಗಳು ಪುರಸ್ಕರಿಸಿ, ದಿನಾಂಕ 3–11–2009 ರಲ್ಲಿ ವಿಭಾಗೀಯ ಪೀಠವು ಸರ್ಕಾರದ ರಿಟ್ ಅಪೀಲನ್ನು ತಿರಸ್ಕರಿಸಿ, ಕೆಳಗಿನಂತೆ ತೀರ್ಪು ನೀಡಿತು.

"The Division Bench of the Hon'ble High Court of Karnataka dismissed the writ appeals filled by the state and allowed the writ petitions holding that the writ petitioners are entitled for pension and gratuity the date of filing of the writ petitions and erroneously directed the state Government to grant the writ petitioners the pensions and gratuity"

ಶ್ರೀ ಮಧುಚಂದ್ರ ಎಂಬ ಶಿಕ್ಷಕರ ಪ್ರಕರಣದಲ್ಲಿ ನೀಡಿದ ವಿಭಾಗೀಯ ಪೀಠದ ತೀರ್ಪನ್ನು ಸರ್ಕಾರವು ಎಸ್‌ಸಿಪಿಯನ್ನು ದಾಖಲಿಸುವುದರ ಮೂಲಕ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲನ್ನು ಸಲ್ಲಿಸಿತು.

ಈ ರಿಟ್ ಅಪೀಲನ್ನು ಸರ್ವೋಚ್ಚ ನ್ಯಾಯಾಲಯವು ತಿರಸ್ಕರಿಸಿದ್ದರಿಂದ, ಸರ್ಕಾರವು ಅನಿವಾರ್ಯವಾಗಿ ಆದೇಶ ಸಂಖ್ಯೆ ಇಡಿ:147:ಡಿಜಿಡಬ್ಲ್ಯು 2011 ದಿನಾಂಕ 22–2–13 ರಂದು ಹೊರಡಿಸಿ, ಶ್ರೀ ಮಧುಚಂದ್ರರವರಿಗೆ ಸೇವೆಗೆ ಸೇರಿದ ದಿನಾಂಕದಿಂದ ಎಲ್ಲಾ ಸೌಲಭ್ಯಗಳನ್ನು ಕೊಡುವಂತೆ ಆದೇಶಿಸಿತು. ಈ ಆದೇಶವು ಇದೊಂದು ಪ್ರಕರಣಕ್ಕೆ ಮಾತ್ರ ಸಂಬಂಧಿಸಿದ್ದು, ಪೂರ್ವ ನಿರ್ದೇಶನವೆಂದು ತೆಗೆದುಕೊಳ್ಳತಕ್ಕದ್ದಲ್ಲವೆಂದು ಆದೇಶದಲ್ಲಿ ಉಲ್ಲೇಖಿಸಲಾಯಿತು.

ಮುಂದೆ ದಿನಾಂಕ 21–8–13 ರಂದು ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ಸರ್ಕಾರದ ವಿರುದ್ಧ ನಾಗೇಗೌಡ ಹಾಗೂ ಇತರರ ಪ್ರಕರಣದಲ್ಲಿ ಅಂದರೆ ಎಸ್‌ಸಿಪಿ ಸಂಖ್ಯೆ 22176–186/2010 ನ್ನು ಇತ್ಯರ್ಥಪಡಿಸಿ, ಅನುದಾನ ರಹಿತ ಅವಧಿಯ ಎಲ್ಲಾ ಸೌಲಭ್ಯಗಳನ್ನು ನೀಡುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದು ಸರ್ಕಾರದ ಸ್ಪೆಷಲ್ ಲಿವ್ ಪಿಟಿಶನ್‌ನ್ನನ್ನು ತಿರಸ್ಕರಿಸಿದೆ.

ಈ ನ್ಯಾಯಾಲಯದ ಆದೇಶದಂತೆ ಇಂದು ರಾಜ್ಯದ ಅನುದಾನಿತ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಕಾಲೇಜುಗಳ ಸಿಬ್ಬಂದಿ ಹಾಗೂ ಐಟಿಐ, ಡಿಪ್ಲೊಮಾ, ಪ್ರಥಮ ದರ್ಜೆ ಕಾಲೇಜುಗಳ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸಿಬ್ಬಂದಿ ಕೂಡ ಅನುದಾನ ರಹಿತ ಸೇವೆಯ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅರ್ಹತೆ ಹೊಂದಿರುತ್ತಾರೆ.

ಕೇವಲ ನ್ಯಾಯಾಲಯದಿಂದ ಆದೇಶ ಪಡೆದವರಿಗೆ ಮಾತ್ರ ಈ ಸೌಲಭ್ಯವನ್ನು ವಿಸ್ತರಿಸಿದರೆ, ರಾಜ್ಯದ ಸಾವಿರಾರು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು ಹಾಗೂ ನಿವೃತ್ತ ನೌಕರರು ನ್ಯಾಯಾಲಯಕ್ಕೆ ಅಲೆದಾಡಿ ವಿನಾಕಾರಣ ಆರ್ಥಿಕ ಹಾನಿಗೆ ಒಳಗಾಗುವುದಲ್ಲದೆ, ಮಾನಸಿಕ ಹಿಂಸೆಯಿಂದ ತೊಂದರೆ ಅನುಭವಿಸಬೇಕಾಗುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟವಾಗಿ ಸರ್ಕಾರದ ಸ್ಪೆಷಲ್ ಲಿವ್ ಪಿಟಿಶನ್ನನು ತಿರಸ್ಕರಿಸಿರುವುದರಿಂದ, ಶಿಕ್ಷಕರಿಗೆ ನ್ಯಾಯಯುತವಾಗಿ ದೊರಬೇಕಾಗದ ಅನುದಾನ ರಹಿತ ಅವಧಿಯ ಎಲ್ಲಾ ಸೌಲಭ್ಯಗಳನ್ನು ಸಾರ್ವತ್ರಿಕ ಆದೇಶ ಹೊರಡಿಸುವುದರ ಮೂಲಕ ಪರಿಹರಿಸಬೇಕಾಗಿರುವುದು ಆದರ್ಶ ಸರ್ಕಾರದ ಆದ್ಯ ಕರ್ತವ್ಯವಾಗುತದೆ.

(17ನೇ ಪುಟಕ್ಕೆ.....)

# ಅಧ್ಯಾಪನ – ಒಂದು ವೃತ್ತಿಯೇ ಅಥವಾ ಸಾಮಾಜಿಕ ಹೊಣೆಯೇ?

■ ಶ್ರೀ ಚಂದ್ರಶೇಖರ ಭಂಡಾರಿ

ವಾಸ್ತವಿಕವಾಗಿ ಈ ಶೀರ್ಷಿಕೆಯಲ್ಲಿರುವ ಇವೆರಡರಲ್ಲಿ ದ್ವಂದ್ವವೇನಿಲ್ಲ; ಏಕಕಾಲದಲ್ಲಿ ಇವೆರಡೂ ಆಗಿರುವುದು ನಿಜವೇ. ತಮ್ಮ ಪರಿವಾರದ ಉದರಂಭರಣಕ್ಕಾಗಿ ಹಣಸಂಪಾದನೆಯನ್ನೇ ಗುರಿಯಾಗಿರಿಸಿ ಅಧ್ಯಾಪನ ಮಾಡುವವರಿಗದು ಕೇವಲ ವೃತ್ತಿ ಮಾತ್ರವಾಗಿ ಉಳಿಯುತ್ತದೆ. ಆದರೆ ಅಧ್ಯಾಪನದಲ್ಲಿ ಸಮಾಜದ ತಾತ್ಕಾಲಿಕ ಅಗತ್ಯಗಳನ್ನು ಪೂರೈಸುವಂತಹ ಇನ್ನಿತರ ಉದ್ಯೋಗಗಳಿಂದ ಭಿನ್ನವಾದ, ಅದರ ಭವಿಷ್ಯವನ್ನು ದೂರಗಾಮಿಯಾಗಿ ರೂಪಿಸುವಂತಹ ಅನನ್ಯತೆಯಿರುವುದನ್ನೂ ಅಲ್ಲಗಳೆಯಲಾಗುವುದಿಲ್ಲ. ಹೀಗಾಗಿ ಈ ವೃತ್ತಿಯಲ್ಲಿ ಸಾಮಾಜಿಕ ಹೊಣೆಯ ಪಾತ್ರವೂ ಗಣನೀಯವಾಗಿ ಇದೆ. ಇವೆರಡರಲ್ಲಿ ಯಾವುದು ಹೆಚ್ಚಿನ ಮಹತ್ತ್ವದ್ದೆಂಬುದು ಆಯಾ ಅಧ್ಯಾಪಕನ ಜೀವನದೃಷ್ಟಿಯ ಮೇಲೆ ನಿರ್ಭರಿತವಾಗಿರುತ್ತದೆ.

ಮೇಲ್ನೋಟಕ್ಕೆ ಗೋಚರಿಸುವಂತೆ ಅಧ್ಯಾಪಕನ ವೃತ್ತಿ ಕಿರಿಯ ಪೀಳಿಗೆಯವರನ್ನು ಶಿಕ್ಷಿತರನ್ನಾಗಿ ಮಾಡುವುದು; ಕಿರಿಯರು ತಿಳಿಯದೆ ಇರುವ ಹತ್ತಾರು ವಿಷಯಗಳನ್ನು, ಮಾಹಿತಿಗಳನ್ನು ಅವರಿಗೆ ಕಲಿಸಿ, ಅವರ ತಿಳಿವಳಿಕೆಯನ್ನು ಹಂತಹಂತವಾಗಿ ಸಮೃದ್ಧಗೊಳಿಸುವ ಮೂಲಕ ಪ್ರಾಪ್ತ ವಯಸ್ಕರಾದಾಗ ಅವರು ತಮ್ಮ ಮನೆ, ಪರಿವಾರವನ್ನು ನಡೆಸಿಕೊಂಡು ಹೋಗುವಷ್ಟು ಸಮರ್ಥರನ್ನಾಗಿ ಮಾಡುವುದು – ಅಷ್ಟೇ ಎಂಬಂತೆ ಅನಿಸುತ್ತದೆ. ಆದರೆ ಶಿಕ್ಷಿತರೆನಿಸಿ ಕೊಂಡವರು ಮುಂದೆ ಇತರರನ್ನು ಅವಲಂಬಿಸದೆ ತಮ್ಮ ಪರಿವಾರದ ಬದುಕನ್ನು ಸ್ವಾವಲಂಬಿಯಾಗಿ ನಿರ್ವಹಿಸು ವಂತಾಗಬೇಕೆಂಬುದು ಸಹ ಅಪೇಕ್ಷಿತ ವಿರುವುದರಿಂದ ಅಧ್ಯಾಪನ ವೃತ್ತಿಯಲ್ಲಿ ಅವರನ್ನು ಅದಕ್ಕಾಗಿ ರೂಪಿಸುವಂತಹ ಸಾಮಾಜಿಕ ಹೊಣೆಯೂ ಪರ್ಯಾಯವಾಗಿ ಅಡಕ ವಾಗಿರುವುದು ಕೂಡ ಅಷ್ಟೇ ನಿಜ.

ಆದರೆ ಶಿಕ್ಷಿತನೆನಿಸುವ ವ್ಯಕ್ತಿಯಿಂದ ಅಪೇಕ್ಷಿತವಿರುವುದು ಇಷ್ಟು ಮಾತ್ರವಲ್ಲ. ತಾನು ಹುಟ್ಟಿ ಬೆಳೆದ ಸಮಾಜಕ್ಕೆ ಉಪಯುಕ್ತ ವಾದ ನಾಗರಿಕನೂ ಅವನಾಗಬೇಕು. ಓರ್ವ ಪ್ರಬುದ್ಧ, ಹೊಣೆಗಾರಿಕೆಯ ಪ್ರಜ್ಞೆಯುಳ್ಳ ಪ್ರಜೆಯೂ ಅವನಾಗಬೇಕು. ವ್ಯಕ್ತಿಯೊಬ್ಬನಿಗೆ ಸಮಾಜದಿಂದ ಪ್ರತ್ಯೇಕವಾದ ಬದುಕೆಂಬುದಿಲ್ಲ. ಅವನ ಆಹಾರ, ಬಟ್ಟೆ, ವಸತಿ, ಆರೋಗ್ಯ, ಶಿಕ್ಷಣ, ರಕ್ಷಣೆ ಇವೆಲ್ಲವೂ ಅವನಿಗೆ ಲಭಿಸುವುದು ಸಮಾಜದಿಂದಲೇ. ಹೀಗಾಗಿ ಸಮಾಜವನ್ನು ಅಲಕ್ಷಿಸಿ ಬದುಕಲು ಅವನಿಗೆ ಸಾಧ್ಯವಿಲ್ಲ. ಯಾವುದೇ ವಿಧದಿಂದಲಾದರೂ ಸಮಾಜದ ಋಣ ಸಲ್ಲಿಸಿ, ಅದಕ್ಕೆ ಶಕ್ತಿ ತುಂಬಬೇಕಾದ ಹೊಣೆಯೂ ಅವನಿಗಿದೆ. ಪ್ರತಿ ಯೊಬ್ಬ ಶಿಕ್ಷಿತ ವ್ಯಕ್ತಿಗೂ ಅಪರಿಹಾರ್ಯ ವಾಗಿ ಇರುವಂತಹ ಸಾಮಾಜಿಕ ಬದ್ಧತೆ (social committment) ಇದು.

ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಇಂತಹ ಸಾಮಾಜಿಕ ಬದ್ಧತೆಗೆ ಒತ್ತು ಇಲ್ಲವಾಗುತ್ತಿರುವುದು ಗಂಭೀರವಾಗಿ ಚಿಂತಿಸ ಬೇಕಾದ ಸಂಗತಿ. ಇಂದಿನ ಶಿಕ್ಷಣದಲ್ಲಿ ಸಾಮಾಜಿಕ ಬದ್ಧತೆ ಯನ್ನು ಕಡೆಗಣಿಸಿ ಕೇವಲ ಕೈತುಂಬ ಹಣಸಂಪಾದನೆಯ ಉದ್ಯೋಗಪ್ರಧಾನ ಮಾನಸಿಕತೆಯನ್ನಷ್ಟೇ (career mindedness) ರೂಪಿಸುವುದರಲ್ಲಿ ಹೆಚ್ಚಿನ ಒತ್ತು ಇರುವುದು ದುರದೃಷ್ಟಕರ ಬೆಳವಣಿಗೆಯಾಗಿದೆ. ವಿದ್ಯಾರ್ಥಿಗಳಂತೂ ಪರೀಕ್ಷೆಗಳಲ್ಲಿ ಅತಿ ಹೆಚ್ಚಿನ ಅಂಕಗಳು ಮತ್ತು ರ್‍ಯಾಂಕ್ ಪಡೆಯುವುದನ್ನೇ ಅತಿಮಹತ್ತ್ವದ್ದಾಗಿ ತಿಳಿಯುತ್ತಾರೆ. ಪಾಲಕರು ತಮ್ಮ ಮಕ್ಕಳ ಮೇಲೆ ಒತ್ತಡ ಹೇರುವುದು ಸಹ ಇವೆರಡಕ್ಕಾಗಿಯೇ. ಅಧ್ಯಾಪಕರು ಮತ್ತು ಶಾಲಾಡಳಿತ ದವರಿಗೂ ತಮ್ಮ ವಿದ್ಯಾರ್ಥಿಗಳು ಇವೆರಡರಲ್ಲಿ ಇನ್ನೆಲ್ಲರಿಗಿಂತ ಮುಂದಿದ್ದು ದಾಖಲೆ ಸೃಷ್ಟಿಸಿ ತಮಗೆ ಕೀರ್ತಿ ತಂದುಕೊಟ್ಟಲ್ಲಿ ತಮ್ಮ ಸಾಧನೆ ಸಾರ್ಥಕವಾಯಿತೆನಿಸುತ್ತದೆ. ಒಟ್ಟಿನಲ್ಲಿ ಸಂಪೂರ್ಣ ಶಿಕ್ಷಣ ವ್ಯವಸ್ಥೆಯೇ ಸ್ಪರ್ಧಾತ್ಮಕ ಗೊಳ್ಳುತ್ತಿದ್ದು, ಅದರಲ್ಲಿ ಮಿಕ್ಕವರನ್ನು ಹಿಂದಿಕ್ಕಿ, ತಾನು ಸರ್ವಶ್ರೇಷ್ಠನಾಗಿ ಹೆಸರು ಗಳಿಸುವುದೇ ಎಲ್ಲರ ಲಕ್ಷ್ಯವಾಗುತ್ತಿದೆ. ಇದೆಲ್ಲ ಏಕೆ? ವಿದ್ಯಾರ್ಥಿಗಳಿಗೆ (ಮತ್ತು ಅವರ ಪಾಲಕರಿಗೂ) ಶಿಕ್ಷಣದಿಂದ ತಮಗೊಂದು ಲಾಭದಾಯಕ 'ಕೆರಿಯರ್'ಗೆ (ಅಥವಾ ಹೆಚ್ಚಿನ ಧನಸಂಪಾದನೆಯ ಉದ್ಯೋಗಕ್ಕೆ) ದಾರಿ ತೆರೆದುಕೊಳ್ಳು ವಂತಾಗಬೇಕು ಅನಿಸುತ್ತಿದ್ದಲ್ಲಿ, ಅಧ್ಯಾಪಕರು ಮತ್ತು ಶಾಲಾಡಳಿತ ಮಂಡಲಿಗೆ ಅದರಿಂದ ತಮ್ಮ ಸಂಸ್ಥೆಗೊಂದು ಕೀರ್ತಿ ಲಭಿಸಿ, ಆ ಮೂಲಕ ತಮ್ಮ 'ಕ್ಯಾರಿಯರ್' ಹೆಚ್ಚಿನ ಪ್ರತಿಷ್ಠೆ ಗಳಿಸಬೇಕೆಂದು ಅನಿಸುತ್ತದೆ. ವಾಸ್ತವಿಕವಾಗಿ ಯಾವುದೇ ಸ್ಪರ್ಧೆ ಆರೋಗ್ಯಕರವಾಗಿದ್ದಲ್ಲಿ ತಪ್ಪೇನಿಲ್ಲ. ಆದರೆ ಈ ಸ್ಪರ್ಧೆ ಯಲ್ಲಿ ಎಲ್ಲರೂ ಸ್ವಕೇಂದ್ರಿತರಾಗಿ (self centred) ಚಿಂತಿಸು ವವರಾಗುತ್ತಿದ್ದಾರೆ. ಇದರ ಪರಿಣಾಮವೆಂದರೆ ಎಲ್ಲರಲ್ಲೂ ಸಾಮಾಜಿಕ ಸಿದ್ಧತೆ ಕ್ರಮೇಣ ಲುಪ್ತವಾಗುತ್ತಿದೆ. ಶಿಕ್ಷಿತರಲ್ಲಿ ತಾವು ಸಮಾಜ ಋಣ ಸಲ್ಲಿಸಬೇಕಾಗಿದೆ ಎಂಬುದು ಗೌಣ ವಾಗುತ್ತಿದೆ. ಅದರಿಂದಾಗಿ ತಮ್ಮ ಕಿರಿಯ ಪೀಳಿಗೆಯವರು ಶಿಕ್ಷಣದಿಂದ ತಮ್ಮ ವಿದ್ವತ್ತು, ಕರ್ತೃತ್ವ, ಪ್ರತಿಭೆ ಇತ್ಯಾದಿ ಅರಳಿಸಿಕೊಂಡರೂ, ಕೇವಲ ತಮ್ಮ ಆರ್ಥಿಕ ಶ್ರೀಮಂತಿಕೆಗಾಗಿ ಹಾತೊರೆಯುವವರಾಗುತ್ತಿದ್ದಾರೆ. ಇನ್ನೊಂದು ಕಡೆ ದೇಶದ ಮತ್ತು ಸಮಾಜದ ಹಿತಕ್ಕೆ ಸಂಬಂಧಿಸಿ ತಮ್ಮ ಹೊಣೆಗೆ ಅವರು ಕುರುಡರಾಗುತ್ತಿದ್ದಾರೆ. ಸ್ವಾತಂತ್ರ್ಯೋತ್ತರ ಕಾಲಾವಧಿ ಯಲ್ಲಿ ಶಿಕ್ಷಣದ ವ್ಯವಸ್ಥೆಯಲ್ಲಿ ತಲೆಯೆತ್ತಿರುವ ಅನಾರೋಗ್ಯಕರ ವಿದ್ಯಮಾನ ಇದು.

ಈ ದೋಷವನ್ನು ಸರಿಪಡಿಸಬಲ್ಲವರು ಮತ್ತು ಅಂತಹ ಹೊಣೆ ನಿರ್ವಹಿಸಬೇಕಾದವರು ಅಧ್ಯಾಪಕರೇ. ಕಾರಣವೆಂದರೆ ದೇಶದ ಭವಿಷ್ಯ ರೂಪಿಸುವಂತಹ ಕಿರಿಯ ಪೀಳಿಗೆಯ ಕಿಶೋರರು ಶಿಕ್ಷಿತರಾಗಿ ತಯಾರಾಗು ವುದು ಅವರ ಕೈಗಳಲ್ಲಿ. ಓರ್ವ ಕಿಶೋರ ತನ್ನ ಬದುಕಿನ ಸುಯೋಗ್ಯ ಆಕಾರ ತಳೆಯುವುದು ಅವನ ಶಾಲಾಶಿಕ್ಷಣದ ಕಾಲಘಟ್ಟದಲ್ಲಿ. ಆ ವಯಸ್ಸಿನಲ್ಲಿ ಅವನಲ್ಲಿ ಅನೇಕ ವಿಷಯಗಳನ್ನು ತಿಳಿಯ ಬೇಕೆಂಬ ಹಂಬಲ, ಹಸಿವು ಸಹಜವಾಗಿ ಇರುತ್ತದೆ. ತಾನು ಶ್ರದ್ಧೆ–ಗೌರವದಿಂದ, ಕಾಣುವಂತಹ ಅಧ್ಯಾಪಕರು ಏನು ಹೇಳಿದರೂ ಆಗ ಅವನು ಕೇಳುತ್ತಾನೆ, ಪೂರಾ ನಂಬುತ್ತಾನೆ ಮತ್ತು ನಿರಾಳ ಮನದಿಂದ ಸ್ವೀಕರಿಸುತ್ತಾನೆ ಸಹ. ಅಧ್ಯಾಪಕರು

(13ನೇ ಪುಟಕ್ಕೆ.....)

12ನೇ ಪುಟದಿಂದ... **ಅಧ್ಯಾಪನ**

ಹೇಳುವಂತಹ ಒಂದೊಂದು ಮಾಹಿತಿಯಿಂದಲೂ ಅವನ ತಿಳಿವಳಿಕೆ ಶ್ರೀಮಂತವಾಗುತ್ತದೆ. ತಾವು ಕಲಿಸುವ ವಿಷಯ ಯಾವುದೇ ಇರಲಿ, ತರಗತಿಯಲ್ಲಿ ತಾವು ಹೇಳುವಂತಹ ಅನೇಕಾರು ಮಾಹಿತಿಗಳ ಮತ್ತು ತಮ್ಮ ಕಲಿಸುವ ಶೈಲಿಯ ಮೂಲಕ ಅಧ್ಯಾಪಕರು ಕಿಶೋರ ವಿದ್ಯಾರ್ಥಿಗಳಲ್ಲಿ ಉತ್ತಮ ವಿಚಾರ ಮತ್ತು ಉನ್ನತ ಭಾವನೆಗಳನ್ನು ಬೀಜದ ರೂಪದಲ್ಲಿ ಬಿತ್ತಬಹುದು. ಉದಾಹರಣೆಗಾಗಿ ಭೂಗೋಳ ಮತ್ತು ಇತಿಹಾಸ ಪಾಠದಲ್ಲಿ ಭಾರತದ ಬಗ್ಗೆ ಅದು ನಮ್ಮ ತಾಯಿಯೆಂಬ ದೃಷ್ಟಿ, ಇಲ್ಲಿನ ನದಿಗಳ ಕುರಿತು ಪಾವಿತ್ರ್ಯದ ಭಾವನೆ, ತೀರ್ಥ ಕ್ಷೇತ್ರಗಳಿಗೆ ಸಂಬಂಧಿಸಿ ಶ್ರದ್ಧೆ, ಮಹಾಪುರುಷರ ವಿಷಯದಲ್ಲಿ ಅಭಿಮಾನ ಇತ್ಯಾದಿ – ಅವು ಇಂದಿನ ಪಾಠ್ಯಕ್ರಮದಲ್ಲಿಲ್ಲ ದಿದ್ದರೂ – ರಸವತ್ತಾಗಿ ಹೇಳುವ ಅವಕಾಶ ಅಧ್ಯಾಪಕರಿಗಿದೆ. ಗಣಿತ, ವಿಜ್ಞಾನ ಇತ್ಯಾದಿ ಕಲಿಸುವಾಗ ಆ ಕ್ಷೇತ್ರಗಳಲ್ಲಿ ನಮ್ಮ ಪೂರ್ವಜರ ಅಪೂರ್ವ ಸಾಧನೆಗಳನ್ನು ಹೇಳಿದಲ್ಲಿ ವಿದ್ಯಾರ್ಥಿಗಳಾಗಿರುವವರ ಮೇಲೆ ಅವು ಪ್ರಭಾವ ಬೀರುತ್ತವೆ. ಈ ನಿಟ್ಟಿನಲ್ಲಿ ಹಲವು ಮುಖಗಳಲ್ಲಿ ಅವರಲ್ಲಿ ಆಸಕ್ತಿ ಕೆರಳಿಸಿ, ಹೆಚ್ಚಿನ ಓದಿಗಾಗಿ ಗ್ರಂಥಾಲಯಗಳಲ್ಲಿ ಲಭ್ಯವಿರುವ ಪುಸ್ತಕಗಳ ಮಾಹಿತಿ ನೀಡಬಹುದು. ಅಂತಹ ಪುಸ್ತಕಗಳನ್ನು ಓದಿ ಟಿಪ್ಪಣಿ ಬರೆದಿಡಲು ಅವರನ್ನು ಪ್ರೋತ್ಸಾಹಿಸಬಹುದು. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಕ್ರಮದಲ್ಲಿ, ಪಾಠಪುಸ್ತಕಗಳಲ್ಲಿ ಅದೆಷ್ಟೇ ವಿಕೃತಿಗಳಿದ್ದರೂ, ಅಧ್ಯಾಪಕರಲ್ಲಿ ಸುಯೋಗ್ಯ ದೃಷ್ಟಿಯಿದ್ದಲ್ಲಿ, ಅವೆಲ್ಲವನ್ನೂ ಕುಶಲ ರೀತಿಯಲ್ಲಿ ನಿಷ್ಪ್ರಭೆಗೊಳಿಸಲು ಅವರಿಗೆ ಸಾಧ್ಯವಿದೆ.

ಅದೇ ರೀತಿಯಲ್ಲಿ ಋಜು ಮಾರ್ಗದಲ್ಲಿ ಹಣ ಸಂಪಾದನೆ, ದೇಶದ ಮತ್ತು ಸಮಾಜದ ಹಿತಕ್ಕೆ ಬದುಕಿನಲ್ಲಿ ಆದ್ಯತೆ, ಯಾರಿಗೂ ಕೇಡು ಬಯಸದ ಸ್ನೇಹಶೀಲ ಮನೋಧರ್ಮ, ಶುದ್ಧ ಮೌಲ್ಯವತ್ತಾದ ಜೀವನವಿಧಾನ ಇತ್ಯಾದಿ ಸಂಗತಿಗಳಲ್ಲೂ ಕಿಶೋರ ವಿದ್ಯಾರ್ಥಿಗಳಿಗೆ ಅಧ್ಯಾಪಕರಿಂದ ಸೂಕ್ತ ಮಾರ್ಗದರ್ಶನ ಅಗತ್ಯವಾಗುತ್ತದೆ. ಇವೆಲ್ಲ ಸಂಗತಿಗಳು ಅವರ ಭಾವೀಜೀವನಕ್ಕೆ ಸಂಬಂಧಿಸಿದವೆಂಬುದು ನಿಜ. ಆದರೆ ಇನ್ನೂ ಕಿಶೋರಾವಸ್ಥೆಯಲ್ಲಿರುವ ಅವರು ಅದೇ ತಾನೇ ತಾರುಣ್ಯದ ಹೊಸ್ತಿಲು ತಲಪುವಾಗ ತಮ್ಮ ಬದುಕಿನ ಕವಲುದಾರಿ ಅವರಿಗೆ ಗೋಚರಿಸುತ್ತದೆ. ಯಾವುದು ಸರಿ, ಯಾವುದು ತಪ್ಪೆಂಬ ದ್ವಂದ್ವ ಆಗ ಅವರಿಗೆದುರಾಗುವುದು ಸಹಜ. ಈ ಸಂದರ್ಭ ಗಳಲ್ಲಿ ಸುಯೋಗ್ಯ ದಿಶಾಬೋಧ ಅವರಿಗೆ ಅಧ್ಯಾಪಕರಿಂದ ದೊರೆತಲ್ಲಿ, ಅವರು ದೂರಗಾಮಿಯಾಗಿ ನಾಡಿನ ಸತ್ಪ್ರಜೆಗಳಾಗಿ ಬೆಳೆಯಬಲ್ಲರು. ಅವರ ಮನದಲ್ಲಿ ಉತ್ತುಂಗ ಧ್ಯೇಯವಾದ, ಶ್ರೇಷ್ಠ ಆದರ್ಶಗಳು, ಮಹೋನ್ನತ ಮೌಲ್ಯಗಳು ಇತ್ಯಾದಿ ಸಹ ಚಿಗುರೊಡೆಯುವುದು ಅವರ ಈ ಕಿಶೋರಾವಸ್ಥೆಯಲ್ಲೆ. ಈ ಹಂತದಲ್ಲಿ ಡಿವಿಜಿ, ವಿಶ್ವೇಶ್ವರಯ್ಯ ಅವರಂತಹ ನಿಕಟ ಪೂರ್ವದ ಮಹಾನುಭಾವರ ಮೌಲ್ಯವತ್ತಾದ ಚಿಂತನೆಯ ಶೈಲಿ, ಬದುಕಿನ ರೀತಿ ಇತ್ಯಾದಿ ಅವರಿಗೆ ತಿಳಿಸಿದಲ್ಲಿ ಅವರಲ್ಲಿ ಮೊಳೆಯುವ ಈ ಚಿಗುರಿಗೆ ಅವು ನೀರು, ಗೊಬ್ಬರ ಒದಗಿಸಬಲ್ಲವು. ವಾಸ್ತವಿಕವಾಗಿ ಹಣಸಂಪಾದನೆ ಯಾಗಲಿ, ಗೌರವಾನ್ವಿತ ಉದ್ಯೋಗದ ಕೆರಿಯರ್ ಆಗಲಿ, ಯಾರೇ ಆದರೂ ಬಯಸುವುದು ಸಹಜವೇ. ಆದರೆ ಬದುಕಿನ ಗುರಿ ಅದೇ ಆಗಬೇಕೆಂದು ಸಹ ಇಲ್ಲ. ಗುರಿಯಾಗಿರಬೇಕಾದುದು ಸ್ವಚ್ಛ, ನಿಷ್ಕಲಂಕ, ಸಮಾಜಾನುರಾಗಿ ಜೀವನಶೈಲಿ. ಅರವಿಂದ ಘೋಷ್, ಸುಭಾಷ್‌ಚಂದ್ರ ಬೋಸ್ ಮೊದಲಾದವರು ತಮ್ಮ ಕಾಲದ ಅತ್ಯುನ್ನತ ಹುದ್ದೆಗಾಗಿ ತಮ್ಮನ್ನು ತರಬೇತಿ ಗೊಳಿಸಿಕೊಂಡವರೇ. ಆದರೆ ತಾವು ಹುಟ್ಟಿ ಬೆಳೆದ ಸಮಾಜದ ಹಿತಕ್ಕೆ ಅದರಿಂದ ಧಕ್ಕೆಯಾಗುವುದು ಅನಿಸಿದಾಗ ಅದನ್ನು ಒದ್ದು ಸಮಾಜಕಾರ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದ ಅವರ ಆದರ್ಶವನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕಾದವರು ಅಧ್ಯಾಪಕರೇ. ಇವೆಲ್ಲವೂ ಪಠ್ಯಕ್ರಮದಲ್ಲಿರುವ ಸಂಗತಿಗಳಲ್ಲ. ಈ ಕುರಿತು ವಿದ್ಯಾರ್ಥಿಗಳು ಅಧ್ಯಾಪಕರೊಂದಿಗೆ ಚರ್ಚಿಸು ತ್ತಾರೆಂದೂ ಅಲ್ಲ. ಆದರೆ ತರಗತಿಯಲ್ಲಿ ಪಾಠ ಕಲಿಸುವಾಗಲೇ ಸಮಯ ಸಂದರ್ಭಕ್ಕನುಗುಣವಾಗಿ ಇಂತಹ ಹಲವಾರು ಮಾಹಿತಿಗಳನ್ನು ಕತೆಗಳು, ಘಟನೆಗಳು ಉದಾಹರಣೆಗಳ ರೂಪದಲ್ಲಿ ಹೇಳಲು ಅಧ್ಯಾಪಕರಿಗೆ ಸಾಧ್ಯವಿದೆ.

ನಮ್ಮ ಸಮಾಜದಲ್ಲಿ ಹಲವಾರು ದೋಷಗಳೂ ಇವೆ. ಅವುಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸುವುದೂ ಅಗತ್ಯವೇ. ಆದರೆ ಸಮಾಜದ ಬಗ್ಗೆ ತಿರಸ್ಕಾರ ಮೂಡುವಂತಹ ರೀತಿಯಲ್ಲಲ್ಲ. ಬದಲಾಗಿ ಅದರ ಕುರಿತು ಶ್ರದ್ಧೆ, ಗೌರವಗಳನ್ನು ಬಲಪಡಿಸಿ, ದೋಷಗಳನ್ನು ಸರಿಪಡಿಸಬೇಕಾದ ಹೊಣೆ ತಮಗಿದೆ ಎಂಬ ರೀತಿಯಲ್ಲಿ ಅದನ್ನು ಮಂಡಿಸಬೇಕು. ಸ್ವಾಮಿ ವಿವೇಕಾನಂದರು ಸಹ ನಮ್ಮ ಸಮಾಜವನ್ನು ಹಲವು ಸಂದರ್ಭಗಳಲ್ಲಿ ಕಟುವಾದ ಮಾತುಗಳಲ್ಲಿ ಟೀಕಿಸಿರುವುದಿದೆ. ಆದರೆ ಅವರ ಟೀಕೆಯಿರುತ್ತಿದ್ದುದು ಸಮಾಜದ ಬಗ್ಗೆ ಅತ್ಯುತ್ಕಟ ಪ್ರೀತಿ, ಅಭಿಮಾನಗಳ ಹಿನ್ನೆಲೆಯಲ್ಲಿ. ಅದನ್ನು ಸರಿಪಡಿಸಲು ಅಗತ್ಯವಿದ್ದಲ್ಲಿ ಹಲವು ಜನ್ಮಗಳನ್ನೆತ್ತಿ ಬರಲು ತಾನು ಸಿದ್ಧವೆಂದು ಹೇಳುತ್ತಿದ್ದವರು ಅವರು. ಸಮಾಜದ ದೋಷಗಳ ಬಗ್ಗೆ ಉಲ್ಲೇಖ ಮತ್ತು ಅದನ್ನು ಸರಿಪಡಿಸುವ ಸಂಕಲ್ಪ ಮನದಲ್ಲಿ ಬಡಿದೆಬ್ಬಿಸುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸುವುದು ಸೂಕ್ತ.

ಕೊನೆಯಲ್ಲಿ ಒಂದು ಪ್ರಸಂಗ: ದಿ. ನಂಜುಂಡಯ್ಯ ಅವರು ಸಂಘದ ಕಾರ್ಯಕರ್ತರಾಗಿದ್ದವರು. ಹಲವಾರು ವರ್ಷಗಳ ಕಾಲ ಕೊಪ್ಪ, ತೀರ್ಥಹಳ್ಳಿಯಂತಹ ಮಲೆನಾಡ ತಾಲೂಕುಗಳಲ್ಲಿ ಅಧ್ಯಾಪಕರಾಗಿದ್ದು ನೂರಾರು ವಿದ್ಯಾರ್ಥಿಗಳಿಗೆ ಸಮಾಜಮುಖಿ ದೃಷ್ಟಿ ನೀಡಿ ರೂಪಿಸಿದ್ದವರು. ನಿವೃತ್ತರಾಗಿ ತೀರ್ಥಹಳ್ಳಿಯಲ್ಲಿ ಸ್ವಗೃಹದಲ್ಲಿದ್ದಾಗ ಒಮ್ಮೆ ಅವರನ್ನು ಕಾಣಲು ಬಂದಿದ್ದ ಓರ್ವ ತರುಣ, ಅವರಿಗೆ ಸಾಷ್ಟಾಂಗ ನಮಸ್ಕಾರವೆರಗಿ, ಅವರ ಬಳಿ ಏನೋ ತಿಳಿಸಿ ಆಶೀರ್ವಾದ ಪಡೆದು ಹೋದ. ಆಗ ಅಲ್ಲಿದ್ದ ಕಾರ್ಯಕರ್ತರೊಬ್ಬರು ಕುತೂಹಲದಿಂದ ಅವನ ಬಗ್ಗೆ ವಿಚಾರಿಸಿದಾಗ ನಂಜುಂಡಯ್ಯ ಅವರಿಂದ ಗೊತ್ತಾದುದು: ಅವನು ರಾಮಕೃಷ್ಣಾಶ್ರಮಕ್ಕೆ ಸೇರಿ ಸಂನ್ಯಾಸ ಸ್ವೀಕರಿಸುವ ಪೂರ್ವಭಾವಿಯಾಗಿ ಅಧ್ಯಯನಕ್ಕಾಗಿ ಹಿಮಾಲಯಕ್ಕೆ ಹೊರಟವನು. ಮಾಧ್ಯಮಿಕ ಶಾಲೆಯಲ್ಲಿ ಅವರ ವಿದ್ಯಾರ್ಥಿಯಾಗಿದ್ದ ಅವನು ಯಾವುದೋ ಒಂದು ಪ್ರಸಂಗದಲ್ಲಿ ಅವರಿಂದ ಕೇಳಿದ್ದ ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರ ಜೀವನದಿಂದ ಪ್ರೇರಣೆ ಪಡೆದಿದ್ದ. ಅವನ ಬದುಕಿಗೆ ತಿರುವು ನೀಡಿದ ಪ್ರಸಂಗವಾಗಿತ್ತದು.

ಅಧ್ಯಾಪಕ ವೃತ್ತಿಗೆ ಸಾಮಾಜಿಕ ಹೊಣೆಯ ಮಹತ್ತ್ವ ವಿರುವುದು ಈ ವಿಧದ ಕಾರಣಕ್ಕಾಗಿ. ●

# ಪರೀಕ್ಷಾ ತಯಾರಿ –ಹೇಗೆ?

ಯಾವುದೇ ಪರೀಕ್ಷೆ ವಿದ್ಯಾರ್ಥಿ ಜೀವನದಲ್ಲಿ ಬಹಳ ಮುಖ್ಯವಾದ ಹಂತ. ನಮ್ಮ ಮುಂದಿನ ವಿದ್ಯಾಭ್ಯಾಸ, ಹಿಂದಿನ ಪರೀಕ್ಷೆಯಲ್ಲಿ ನಾವು ಗಳಿಸಿದ ಅಂಕಗಳ ಆಧಾರದ ಮೇಲೆಯೇ ನಿಂತಿರುವುದು. ಈಗಂತೂ ಸ್ಪರ್ಧಾಪ್ರಪಂಚ. ಕೇವಲ 'ಎ' ಶ್ರೇಣಿಸಾಲದು ಎ+ ಎ++ ನಮ್ಮ ಗುರಿ ಅಂದ ಮೇಲೆ ನಮ್ಮ ತಯಾರಿಯೂ ಅದಕ್ಕನುಗುಣವಾಗೇ ಇರಬೇಕಲ್ಲವೇ? ನಿಮ್ಮ ಗುರಿ ಸೇರಲು ನಿಮಗೊಂದಿಷ್ಟು ಸಲಹೆ ಸೂಚನೆಗಳು ಇಲ್ಲಿವೆ. ಇದನ್ನು ನೀವು ಪಾಲಿಸಿದಲ್ಲಿ ನಿಮಗೆ ಯಶಸ್ಸು ನಿಶ್ಚಿತ.

ಇಂಗ್ಲೀಷಿನಲ್ಲಿ ಮಾತೊಂದಿದೆ 'There are no short-cut to success. Short cuts, cut short the success' ಈ ಕಾರಣದಿಂದ ನೀವು ಸಾಕಷ್ಟು ಮುಂಚೆಯೇ ಓದಲು ಪ್ರಾರಂಭಿಸಬೇಕು. ಮುಂಚೆ ಎಂದರೆ ಯಾವಾಗ? ನಿಮ್ಮ ಹಿಂದಿನ ಪರೀಕ್ಷೆ ಅಥವಾ ಕಿರುಪರೀಕ್ಷೆ ಮುಗಿದ ಮರುದಿನದಿಂದಲೇ ಮುಂದಿನ ಪರೀಕ್ಷೆಗೆ ಓದುವುದು ಅತ್ಯಂತ ಸೂಕ್ತ.

### ಸಲಹೆ–1
### ಪರೀಕ್ಷೆಯನ್ನು ದ್ವೇಷಿಸದಿರಿ ಅಥವಾ ಭಯ ಪಡದಿರಿ

ಕೆಲವು ವಿದ್ಯಾರ್ಥಿಗಳು ಚೆನ್ನಾಗೇ ಓದುತ್ತಾರೆ. ಆದರೂ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸುತ್ತಾರೆ. ಇದಕ್ಕೆ ಕಾರಣ ಅವರಿಗಿರುವ ಪರೀಕ್ಷಾಭಯ. ಕೆಲವರಂತೂ ಪ್ರಶ್ನೆ ಪತ್ರಿಕೆ ಉತ್ತರಿಸುವಾಗ ವಿಪರೀತ ಬೆವರುವುದು, ನೀರು ಕುಡಿಯುವುದು, ಟೈಂ ಎಷ್ಟೆಂದು ಪದೇ ಪದೇ ಕೇಳುವುದು ಮುಂತಾದವನ್ನು ಮಾಡುತ್ತಾರೆ. ಇದಕ್ಕೆ ಭಯವೇ ಕಾರಣ. ಆದ್ದರಿಂದ ಓದಲು ಪ್ರಾರಂಭಿಸುವ ಮುನ್ನ ಆತ್ಮ ವಿಶ್ವಾಸದಿಂದ ಓದಿರಿ. ನಿಮ್ಮ ಆತ್ಮವಿಶ್ವಾಸ ಹೆಚ್ಚಿದಷ್ಟೂ ಪರೀಕ್ಷಾ ಭಯ ದೂರ ವಾಗುವುದು. ಯಶಸ್ಸಿನ ಮೊದಲ ಹಂತವೇ ಆತ್ಮ ವಿಶ್ವಾಸ

### ಸಲಹೆ–2
### ನೀಲನಕ್ಷೆ ತಯಾರಿಸಿಕೊಳ್ಳಿ

ನೀವು ಮನೆಕಟ್ಟುವುದನ್ನು ನೋಡಿದ್ದೀರಾ? ನೀಲನಕ್ಷೆ ಇಲ್ಲದೆ ಯಾರಾದರೂ ಮನೆಕಟ್ಟುವರಾ? ಹಾಗೆಯೇ ನೀವೂ ಸಹ ನಿಮ್ಮ ಅಧ್ಯಯನದ ನೀಲನಕ್ಷೆ ತಯಾರಿಸಿ ಕೊಳ್ಳಬೇಕು. ಅದನ್ನೇ 'ಟೈಮ್ ಟೇಬಲ್' ಎಂದು ಕರೆಯುವುದು. ಪರೀಕ್ಷೆಗೆ ಇನ್ನೆಷ್ಟು ದಿನ ಇದೆ? ನನಗೆ ಓದಲು ಸಿಗುವ ಅವಧಿ ಎಷ್ಟು? ಎಷ್ಟು ವಿಷಯಗಳಿವೆ? ಪ್ರತಿ ವಿಷಯಕ್ಕೆ ಸಿಗುವ ಕಾಲಾವಧಿ ಎಷ್ಟು? ಇದೆಲ್ಲಾ ಪ್ರಶ್ನೆಗಳಿಗೆ ಉತ್ತರವೇ ಟೈಂ ಟೇಬಲ್. ಇದರಲ್ಲಿ ಕಷ್ಟಕರವಾದ ವಿಷಯಗಳಿಗೆ ಹೆಚ್ಚು ಸಮಯಕೊಡಬೇಕು. ಇಷ್ಟವಾದ ವಿಷಯಗಳಿಗೆ ಕಡಿಮೆ ಸಮಯ ಸಾಕು. ನೆನಪಿಡಿ, ದೇವರು ಎಲ್ಲರಿಗೂ ಕೊಟ್ಟಿರುವುದು 24 ಗಂಟೆ ಮಾತ್ರ. ಇದರಲ್ಲಿ ನಿದ್ದೆ 6–7 ಗಂಟೆ, ಶಾಲಾ ಅವಧಿ 6–7 ಗಂಟೆ, ಊಟ,ತಿಂಡಿ ಸ್ನಾನ ಪಾನ, ಆಟನೋಟಗಳಿಗೆ ಸಮಯ ತೆಗೆದು ಉಳಿದೆಲ್ಲ ಸಮಯವನ್ನು ಓದಲು ಮೀಸಲಿಡಿ. ನೆನಪಿಡಿ, ನಿಮ್ಮ ಟೈಂ ಟೇಬಲ್ ನಲ್ಲಿ ಮನರಂಜನೆಗೂ ಸ್ವಲ್ಪ ಸಮಯ ಮೀಸಲಿಡಿ! ಎರಡು ವಿಷಯಗಳನ್ನು ಓದುವ ನಡುವೆ ವಿರಾಮವಿರಲಿ. ಆ ಸಮಯದಲ್ಲಿ ಹಾಡು ಕೇಳಿ, ಹಾಡಿ, ಮನಸ್ಸಿಗೆ ವಿಶ್ರಾಂತಿ ನೀಡಿ.

### ಸಲಹೆ–3
### ಓದಲೊಂದು ಜಾಗ

ಮನೆಯಲ್ಲಿ ಓದಲೊಂದು ಅನುಕೂಲಕರವಾದ ಜಾಗ ಹುಡುಕಿ. ಟಿ. ವಿ. ಮುಂದು ಕೂತು ಓದದಿರಿ. ಅಡುಗೆ ಮನೆ ಹತ್ತಿರವಂತೂ ಬೇಡವೇ ಬೇಡ. ನೀವು ಆರಿಸುವ ಜಾಗ ನಿಮ್ಮ ಏಕಾಗ್ರತೆಗೆ ಭಂಗ ತರಬಾರದು. ನೀವು ಓದುವ ಸಮಯವೂ ಬಹಳ ಮುಖ್ಯ. ಬೆಳಗಿನ ಜಾವದ ಓದು ಮನಸ್ಸಿಗೆ ನಾಟುತ್ತದೆ. ನಿಶ್ಯಬ್ಧ ವಾತಾವರಣದಲ್ಲಿ ಏಕಾಗ್ರತೆ ಅಧಿಕ. ಪೂರ್ವದಿಕ್ಕಿಗೆ ಮುಖಮಾಡಿ, ನಿಮ್ಮ ಅಂಕಗಳಿಕೆ ಜಾಸ್ತಿ ಆದೀತು. (ಸೂರ್ಯ ರಶ್ಮಿಯಿಂದ ತೂಕಡಿಕೆ ಕಡಿಮೆಯಾಗುತ್ತದಲ್ಲವೇ?).

### ಸಲಹೆ–4
### ಕೂರುವ ಭಂಗಿ

ಇದೇನು ವಿಚಿತ್ರ ಸಲಹೆ ಎಂದು ಭಾವಿಸದಿರಿ. ಏಕಾಗ್ರತೆಗೆ ನೀವು ಕೂರುವ ಭಂಗಿಯೂ ಅತಿಮುಖ್ಯ. ಹಾಸಿಗೆಗೆ ಒರಗಿ, ಈಜೀ ಛೇರ್ ನಲ್ಲಿ ಕೂತು ಓದದಿರಿ. ನಿಮ್ಮ ಬೆನ್ನು ಮೂಳೆ ನೆಟ್ಟಗಿರಲಿ. ಕಾಲನ್ನು ಒಂದು ಮಣೆಯ ಮೇಲಿಡಿ. ನೆಲದ ಮೇಲಿಟ್ಟಲ್ಲಿ ನಿದ್ದೆ ಬಂದೀತು! ಪುಸ್ತಕದ ಮೇಲೆ ಸಾಕಷ್ಟು ಬೆಳಕು ಬೀಳುತ್ತಿರಲಿ. ಮಂದ ಬೆಳಕು ನಿದ್ದೆಗೆ ಆಹ್ವಾನ.

### ಸಲಹೆ–5
### ಟಿಪ್ಪಣಿ ಮಾಡಿಕೊಳ್ಳಿರಿ

ಟಿಪ್ಪಣಿ ಮಾಡುವುದು ಬಹಳ ಮುಖ್ಯವಾದ ಅಂಶ. ಓದುವಾಗ ಒಂದು ಪುಸ್ತಕ, ಪೆನ್ನು ಜತೆಗಿರಲಿ. ನೀವು

(15ನೇ ಪುಟಕ್ಕೆ....)

14ನೇ ಪುಟದಿಂದ... **ಪರೀಕ್ಷೆ ತಯಾರಿ**

ಓದಿದ ವಿವರಗಳನ್ನೆಲ್ಲಾ ಸಣ್ಣ ಸಣ್ಣ ಅಂಶಗಳಾಗಿ ಗುರುತು ಮಾಡಿಕೊಳ್ಳಿ, ನೀವು ಮತ್ತೆ ಓದಿದಾಗ (Revision) ಇದು ನಿಮ್ಮ ಉಪಯೋಗಕ್ಕೆ ಬಂದೀತು. ಪಠ್ಯಪುಸ್ತಕ ಅಥವಾ ನೋಟ್ಸ್ ಓದಲು ಸಮಯವಿಲ್ಲದಾಗ ಈ ಅಂಶ ಮಾತ್ರ ಓದಿದರೆ ಸಾಕು.

### ಸಲಹೆ–6
### ಆರೋಗ್ಯದತ್ತ ಗಮನಕೊಡಿ

ಪರೀಕ್ಷೆ ಎಷ್ಟು ಮುಖ್ಯವೋ ಅದಕ್ಕಿಂತ ಮುಖ್ಯ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು. ಹಿಂದಿನ ರಾತ್ರಿ ನಿದ್ದೆಗೆಟ್ಟು ಓದಿ ಮರುದಿನ ಪರೀಕ್ಷಾ ಕೊಠಡಿಯಲ್ಲಿ ನಿದ್ದೆ ಮಾಡಿದ, ವಾಂತಿ ಮಾಡಿದ ವಿದ್ಯಾರ್ಥಿಗಳನ್ನು ಕಂಡಿದ್ದೇನೆ. ಆದ್ದರಿಂದ ನಿಮಗೆ 6 ಗಂಟೆ ನಿದ್ದೆ ತುಂಬಾ ಅಗತ್ಯವಿದೆ. ಪರೀಕ್ಷೆಯ ಹಿಂದಿನ ದಿನವಂತೂ ಶಾಂತ ಚಿತ್ತರಾಗಿ ನಿದ್ರಿಸಿ. ಇದೇ ರೀತಿ ಆಹಾರದ ಕಡೆ ಗಮನಕೊಡುವುದು ಅಗತ್ಯ. ಪೌಷ್ಟಿಕವಾದ ಆಹಾರ ಸೇವಿಸಿ. ಹಾದಿ ಬೀದಿ ಬದಿಯ ತಿಂಡಿ ತಿನಿಸನ್ನು ತಿನ್ನಬೇಡಿರಿ. ರಾತ್ರಿ ಮಲಗುವ ಮುನ್ನ ಒಂದು ಲೋಟ ನೀರು ಕುಡಿಯಲು ಮರೆಯಬೇಡಿ. ಇದು ನಿಮ್ಮ ಮೆದುಳಿನ ಜೀವಕೋಶಗಳನ್ನು ಉತ್ತೇಜಿಸುತ್ತದೆ.

### ಸಲಹೆ–7
### ಪರೀಕ್ಷೆಯ ದಿನ

ಪರೀಕ್ಷೆಯ ಹಿಂದಿನ ದಿನವೇ ಬರೆಯಲು ಅಗತ್ಯವಿರುವ ಪೆನ್ನು, ಪೆನ್ಸಿಲ್, ರಬ್ಬರ್, ಸಲಕರಣೆಗಳ ಬಾಕ್ಸ್ ಹಾಲ್ ಟಿಕೇಟ್ ಮುಂತಾದವನ್ನು ವ್ಯವಸ್ಥಿತವಾಗಿ ಜೋಡಿಸಿ ಕೊಂಡಿರಿ. ಅಂದು ಬೇಗ ಮಲಗಿ, ಬೇಗ ಏಳಿರಿ, ನಿಮ್ಮ ಟಿಪ್ಪಣಿ ಪುಸ್ತಕವನ್ನೊಮ್ಮೆ ಓದಿ ಮನನ ಮಾಡಿರಿ. ಸಾಕಷ್ಟು ಮುಂಚೆಯೇ ಪರೀಕ್ಷಾ ಕೇಂದ್ರವನ್ನು ತಲುಪಿರಿ (ಕನಿಷ್ಟ ಅರ್ಧಗಂಟೆ ಮುನ್ನ) ನಿಮ್ಮ ಸೀಟ್ ನಂಬರ್, ಕೊಠಡಿ ಕ್ರಮಾಂಕ ಮೊದಲಾದುವನ್ನು ತಿಳಿದುಕೊಳ್ಳಿರಿ. ತಡವಾಗಿ ಹೋದರೆ ಗಾಬರಿಯಾಗುತ್ತದೆ. ಇದರಿಂದ ನಿಮ್ಮ ಮಾನಸಿಕ ಸಂತುಲನ ತಪ್ಪಿ. ಉತ್ತರ ಬರೆಯುವುದರ ಮೇಲೆ ಪರಿಣಾಮವಾಗುತ್ತದೆ. ಎಚ್ಚರ.

### ಸಲಹೆ–8
### ಪರೀಕ್ಷಾ ಕೊಠಡಿಯಲ್ಲಿ

ಉತ್ತರ ಪತ್ರಿಕೆಯಲ್ಲಿ ನೀಡಬೇಕಾದ ಎಲ್ಲಾ ಮಾಹಿತಿಯನ್ನು ಚಿತ್ತಿಲ್ಲದೆ ಭರ್ತಿ ಮಾಡಿ. ನಿಮ್ಮ ಹಾಲ್ ಟಿಕೇಟ್ ಕ್ರಮಾಂಕ ವನ್ನು ಸ್ಪಷ್ಟವಾಗಿ ನಮೂದಿಸಿ. ಪ್ರಶ್ನೆ ಪತ್ರಿಕೆ ಕೈಗೆ ಬಂದ ಕೂಡಲೇ ಅದನ್ನೊಮ್ಮೆ ಅವಲೋಕಿಸಿ. ಕೆಲವೊಮ್ಮೆ ಕೊನೇ ಪುಟ ಮುದ್ರಿತವಾಗದಿರುವ ಸಂಭವವಿರುತ್ತದೆ. ನಿಮ್ಮ ಬರೆಯುವ ಸಲಕರಣೆಗಳನ್ನು ಬೆಂಚಿನ ಮೇಲೆ ಜೋಡಿಸಿಕೊಳ್ಳಿ.

### ಸಲಹೆ–9
### ಉತ್ತರಿಸುವ ಮುನ್ನ

ನಿಮಗೆ ಚೆನ್ನಾಗಿ ಅರ್ಥವಾಗಿರುವ ವಿಶ್ವಾಸದಿಂದ ಉತ್ತರಿಸಬಲ್ಲ ಪ್ರಶ್ನೆಗಳನ್ನು ಮೊದಲು ಉತ್ತರಿಸಿ. ಪ್ರಶ್ನೆಗಳನ್ನು ಅದೇ ಕ್ರಮದಲ್ಲಿ ಉತ್ತರಿಸಬೇಕಾದ ಅಗತ್ಯವಿಲ್ಲ. ನೀವು ಉತ್ತರಿಸುವ ಕ್ರಮ ಅತೀ ಮುಖ್ಯ. ನಿಮ್ಮ ಅಂಕ ಗಳಿಕೆಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ನೀವು ಎಷ್ಟೇ ಓದಿರಬಹುದು, ಆದರೆ ಅದನ್ನು ಹೇಗೆ ನಿರೂಪಿಸುವಿರಿ ಎಂಬುದೂ ಮುಖ್ಯ. ಅಗತ್ಯಕಿಂತ ಉದ್ದವಾದ ಉತ್ತರವನ್ನು ಬರೆಯದಿರಿ. ಮೌಲ್ಯಮಾಪಕ ದಿನಕ್ಕೆ 20–25 ಉತ್ತರ ಪತ್ರಿಕೆ ತಿದ್ದಬೇಕಾಗುತ್ತದೆ. ಅವರು ಉತ್ತರದ ಮುಖ್ಯವಾದ ಅಂಶಗಳನ್ನು ಮಾತ್ರ ಹುಡುಕುತ್ತಾರೆ. ಅಂಶಗಳ ರೂಪದಲ್ಲೇ ಬರೆಯಿರಿ.

ನಿಮ್ಮ ಕೈ ಬರಹ ಓದುವಂತಿರಲಿ. ಚಿಕ್ಕದಾಗಿ ಚೊಕ್ಕವಾಗಿ ಉತ್ತರಿಸಿ. 'First impression is the best impression' ಎಂಬಂತೆ ನಿಮ್ಮ ಪ್ರಾರಂಭದ ಉತ್ತರಗಳು ಬೆಸ್ಟ್ ಆಗಿರಲಿ, ಅದರಿಂದ ಪರೀಕ್ಷಕನ ಮನಸ್ಸು ಗೆಲ್ಲುವಿರಿ.

ಉತ್ತರಿಸುವಾಗ ಸಮಯದ ಹೊಂದಾಣಿಕೆ ಅತಿಮುಖ್ಯ. ಪರೀಕ್ಷೆಗೆ ಮೊದಲು ನೀವು 4–6 ಪತ್ರಿಕೆಗಳನ್ನು ಮನೆಯಲ್ಲಿ ಗಡಿಯಾರ ಇಟ್ಟುಕೊಂಡು ಉತ್ತರಿಸಿದ್ದರೆ, ಪರೀಕ್ಷೆಯಲ್ಲೂ ಸಮಯವನ್ನು ಹೊಂದಿಸುವ ಕಲೆ ಸಿದ್ಧಿಸುತ್ತದೆ. ಯಾವುದೇ ಪ್ರಶ್ನೆಯನ್ನು ಉತ್ತರ ತಿಳಿಯದೆಂದು ಬಿಡದಿರಿ. ಸ್ವಲ್ಪವಾದರೂ ಬರೆಯಿರಿ. ಗಣಿತ ಪತ್ರಿಕೆ ಉತ್ತರಿಸುವಾಗ ಸೂತ್ರ ಹಾಕಿದರೂ ಅರ್ಧ ಅಂಕ ಸಿಗುತ್ತದೆ. ಪಠ್ಯ ಹೊರತಾದ ಪ್ರಶ್ನೆ ಎಂದು ಬಿಡುವುದರಿಂದ ನಷ್ಟವೇ ಜಾಸ್ತಿ. ಅದರ ಕ್ರಮ ಸಂಖ್ಯೆ ಹಾಕಿದ್ದರೆ ಪೂರ್ತಿ ಅಂಕ ಸಿಗುತ್ತದೆ ಎಂಬುದು ನೆನಪಿರಲಿ.

### ಸಲಹೆ–10
### ದುರ್ವ್ಯಹಾರ ಬೇಡ

ಪ್ರೀತಿಯ ವಿದ್ಯಾರ್ಥಿಗಳೇ ಪರೀಕ್ಷಾ ಕೊಠಡಿಯಲ್ಲಿ ದುರ್ವ್ಯಹಾರದಲ್ಲಿ ತೊಡಗದಿರಿ. ಕಾಪಿ ಮಾಡುವುದು ಪಾಪ. ಪರೀಕ್ಷಕನ ಕಣ್ತಪ್ಪಿಸಬಹುದು ಆದರೆ ನಿಮ್ಮ ಅಂತರಾತ್ಮನ ಕಣ್ತಪ್ಪಿಸಲಾರಿರಿ. ನಿಮಗೆ ಉತ್ತರ ತಿಳಿಯದಿದ್ದರೆ ಬರೆಯದಿರಿ. ಪರೀಕ್ಷೆ ಪಾಸಾಗುವುದೇ ಜೀವನದ ಗುರಿ ಅಲ್ಲ. ಮೌಲ್ಯಗಳನ್ನು ರೂಢಿಸಿಕೊಳ್ಳುವುದೇ ಜೀವನದ ಗುರಿ. ಅಕಸ್ಮಾತ್ ಸಿಕ್ಕಿಬಿದ್ದರೆ ವರ್ಷವೂ ನಷ್ಟವಾಗುತ್ತದೆ. ಮಾನವೂ ಹೋಗುತ್ತದೆ.

(16ನೇ ಪುಟಕ್ಕೆ.....)

15ನೇ ಪುಟದಿಂದ... **ಪರೀಕ್ಷೆ ತಯಾರಿ**

**ಸಲಹೆ–11**

### ನಿಮ್ಮಲ್ಲಿ ಶ್ರದ್ಧೆ ಇರಲಿ, ದೇವರನ್ನು ನಂಬಿ

ಈ ಕೊನೆಯ ಅಂಶ ಅತಿಮುಖ್ಯ. ನಾನು ಗೆದ್ದೇ ಗೆಲ್ಲುವೆ ಎಂಬ ಆತ್ಮ ವಿಶ್ವಾಸ ಮೂಡಿಸಿಕೊಳ್ಳಿ. ನಿಮ್ಮ ಸಾಧನೆ ಬಗ್ಗೆ ನಿಮಗೆ ಶ್ರದ್ಧೆ ಇರಲಿ. ಪರೀಕ್ಷೆಗೆ ಮುನ್ನ ನಿಮ್ಮ ಮನಸ್ಸು ಶಾಂತವಾಗಿರಬೇಕು. ಅದಕ್ಕಾಗಿ ಉತ್ತರ ಬರೆಯುವ ಮುನ್ನ ದೀರ್ಘ ಉಸಿರು ತೆಗೆದುಕೊಂಡು, ನಿಮ್ಮ ನೆಚ್ಚಿನ ದೇವರನ್ನು ಪ್ರಾರ್ಥಿಸಿ. ಪ್ರಾರ್ಥನೆ ನಿಮಗೆ ಶಕ್ತಿ, ಆತ್ಮಸ್ಥೈರ್ಯ ನೀಡುತ್ತದೆ. ಮನಸ್ಸನ್ನು ಶಾಂತಗೊಳಿಸುತ್ತದೆ. ಆಗ ಉತ್ತರಗಳು ಗಂಗಾ ನದಿಯಂತೆ ಹರಿಯುತ್ತದೆ.

**ಸಲಹೆ–12**

### ಅತಿಮುಖ್ಯ ಅಂಶ

ಪರೀಕ್ಷೆಯ ನಂತರ ನಿಮ್ಮ ಗೆಳೆಯರೊಡನೆ ಪ್ರಶ್ನೋತ್ತರವನ್ನು ಚರ್ಚಿಸದಿರಿ. ಅದರಿಂದ ನಿಮಗೆ ಏನೂ ಲಾಭವಿಲ್ಲ. ಬದಲಿಗೆ ನಿಮ್ಮ ಮನಸ್ಸನ್ನು ಕಂಗೆಡಿಸುತ್ತದೆ. ಪರೀಕ್ಷೆಯ ನಂತರ ಸೀದಾ ಮನೆಗೆ ಬನ್ನಿರಿ. ಮುಂದಿನ ಪತ್ರಿಕೆಗೆ ಸಿದ್ಧತೆ ಮಾಡಿರಿ.

ಮಕ್ಕಳೇ, ನಿಮ್ಮ ತಾಯಿ, ತಂದೆ ನಿಮ್ಮಿಂದ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿರುತ್ತಾರೆ. ನಿಮ್ಮ ಬಗ್ಗೆ ಅನೇಕ ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ನೀವು ಅವರ ಬಗ್ಗೆ ಯೋಚಿಸಿ. ಅವರನ್ನು ನಿರಾಶೆಗೊಳಿಸದಿರಿ. ನೀವು ಅವರಿಗೆ ಕೊಡಬಹುದಾದ ನೆಚ್ಚಿನ ಕಾಣಿಕೆ ಎಂದರೆ ನಿಮ್ಮ ಯಶಸ್ಸಿನ ಅಂಕ ಪಟ್ಟಿ. ನಿಮ್ಮ ಹೆಸರು ಪತ್ರಿಕೆಯಲ್ಲಿ ಬಂದರೆ ಅವರಿಗೆ ಸ್ವರ್ಗಕ್ಕೆ ಒಂದೇಗೇಣು. ನೀವು ಓದಬೇಕಾದ್ದು ನಿಮಗಾಗಿ ಮಾತ್ರವಲ್ಲ, ನಿಮ್ಮನ್ನು ಪ್ರೀತಿಸುವವರಿಗಾಗಿಯೂ ಹೌದು.

## ಪೋಷಕರಿಗೆ ಸಲಹೆ

ಆತ್ಮೀಯ ಪೋಷಕರೇ, ಪರೀಕ್ಷೆಯ ಸಮಯ, ನಿಮ್ಮ ಮಕ್ಕಳಿಗೆ ಮಾತ್ರವಲ್ಲ ನಿಮಗೂ ಪರೀಕ್ಷೆಯೇ! ಕೇವಲ ಪರೀಕ್ಷೆಯ ಸಮಯದಲ್ಲಿ ನಿಮ್ಮ ಮಕ್ಕಳ ಕಡೆ ಗಮನ ನೀಡಿದರಷ್ಟೇ ಸಾಲದು, ವರ್ಷ ಪೂರ್ತಿ ಅವರಿಗೆ ಮಾರ್ಗದರ್ಶಕರಾಗಿರಬೇಕು. ಈ ಕೆಳಗಿನ ಸಲಹೆಗಳನ್ನು ದಯವಿಟ್ಟು ಗಮನಿಸಿ.

### ನಿಮ್ಮ ಮಗುವಿಗೊಂದಿಷ್ಟು ಸಮಯಕೊಡಿ

ಇಂದಿನ ಬಿಡುವಿಲ್ಲದ ಯುಗದಲ್ಲಿ ಮಕ್ಕಳು ತಾಯ್ತಂದೆಯರ ಪ್ರೀತಿ ಬಯಸುತ್ತಾರೆ. ಆದ್ದರಿಂದ ಅವರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ಅವರಿಗೆ ಓದಲು, ಹೋಮ್ ವರ್ಕ್, ಪ್ರಾಜೆಕ್ಟ್ ಮಾಡಲು ಸಹಕರಿಸಿ ಉತ್ತಮ ವೇಳಾಪಟ್ಟಿ ಮಾಡಿಕೊಡಿ.

### ಶಾಲೆಗೆ ಭೇಟಿ ಕೊಡಿ

ಆಗಾಗ್ಗೆ ನಿಮ್ಮ ಮಗುವಿನ ಶಾಲೆಗೆ ಭೇಟಿ ಕೊಡಿ. ಅವರ ಅಧ್ಯಾಪಕರೊಂದಿಗೆ ನಿಮ್ಮ ಮಗುವಿನ ನಡವಳಿಕೆ, ಓದು ಇದರ ಬಗ್ಗೆ ಚರ್ಚಿಸಿ.

### ಮಗುವನ್ನು ಗೌರವಿಸಿ

ನಿಮ್ಮ ಮಗುವಿನ ಪ್ರೀತಿಯನ್ನು ಗಳಿಸಿ ಅದರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ. ಅದು ತನ್ನ ಭಾವನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವಷ್ಟು ಅದಕ್ಕೆ ಹತ್ತಿರವಾಗಿ ಕಡಿಮೆ ಅಂಕ ಬಂದಾಗ ತೆಗಳದಿರಿ. ಬೇರೊಂದು ಮಗುವಿನೊಂದಿಗೆ ಹೋಲಿಸದಿರಿ. ಪಕ್ಕದ ಮನೆ ಕಿಟ್ಟಿ ನಿನಗಿಂತ ಜಾಣ ಎಂದಾಗ ನಿಮ್ಮ ಮಗುವಿನ ಆತ್ಮಸ್ಥೈರ್ಯ ಉಡುಗುತ್ತದೆ. ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವಂತೆ ನಡೆದುಕೊಳ್ಳಿರಿ.

### ನಿಮ್ಮ ಮಗು ಕೂಚು ಭಟ್ಟ ಆಗದಿರಲಿ

ಓದಿ ಓದಿ ಮರುಳಾದ ಕೂಚುಭಟ್ಟ ಎಂಬ ಗಾದೆ ಇದೆ. ಸದಾ ಓದು ಓದು ಎಂದು ಮಗುವನ್ನು ಆಗ್ರಹಿಸದಿರಿ. ಓದಿನೊಂದಿಗೆ ಶರೀರ, ಮನಸ್ಸಿಗೂ ಶಿಕ್ಷಣಬೇಕು. ಅವನಿಗೆ ಯಾವುದಾದರೊಂದು ಆಟವಾಡಲು ಪ್ರೋತ್ಸಾಹಿಸಿ. ಹಾಡು, ಹಸೆ, ನಾಟ್ಯ, ಚಿತ್ರಕಲೆ ಇತ್ಯಾದಿ ಕಲಾಪ್ರಕಾರದಲ್ಲಿ ಯಾವುದಾದರೊಂದರಲ್ಲಿ ತರಬೇತಿ ಕೊಡಿಸಿ. ಇದೆಲ್ಲಾ ಅವನ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ತುಂಬ ಮಹತ್ವದ ಪಾತ್ರವನ್ನು ವಹಿಸುತ್ತದೆ.

### ನಿಮ್ಮ ಮಗುವಿನ ಆಹಾರದ ಬಗ್ಗೆ ವಿಶೇಷ ಗಮನವಿರಲಿ

ಪರೀಕ್ಷೆಯ ದಿನವಂತೂ ಆಲೂ ಚಿಪ್ಸ್, ಕರೆದ ಪದಾರ್ಥಗಳು ಮುಂತಾದುವನ್ನು ಕೊಡಬೇಡಿ. ಅತಿಖಾರ ರೆಫ್ರಿಜಿರೇಟರ್ ನಿಂದ ತೆಗೆದ ತಂಪು ಪದಾರ್ಥಗಳನ್ನು ವರ್ಜಿಸಿ ಹಾಲು, ಮೊಸರು, ಜೇನು ಮುಂತಾದುವು ಶಕ್ತಿವರ್ಧಕ. ಕನಿಷ್ಠ 6 ಗಂಟೆ ನಿದ್ರೆಗೆ ಅವಕಾಶ ಮಾಡಿಕೊಡಿ.

**ಕೊನೆಯದಾಗಿ ಪರೀಕ್ಷೆಗೆ ಹೋಗುವ ಮುನ್ನ ಆಶೀರ್ವದಿಸಿ ಕಳಿಸಿ. ಅಂದು ಯಾವ ಕಾರಣಕ್ಕೂ ಮಗುವಿನ ಮನಸ್ಸನ್ನು ಮುದಡದಿರಿ, ಕದಡದಿರಿ. ಪರೀಕ್ಷೆಯಿಂದ ಬಂದ ಕೂಡಲೇ ನೂರೆಂಟು ಪ್ರಶ್ನೆ ಹಾಕದೆ ಮರುದಿನದ ಸಿದ್ಧತೆಗೆ ಸಹಕರಿಸಿರಿ.**

**ಲೇಖಕರು : ಎಚ್. ನಾಗಭೂಷಣ್ ರಾವ್**

7ನೇ ಪುಟದಿಂದ... **ಶೈಕ್ಷಣಿಕ ವಿಚಾರಗಳು**

ವಿದ್ಯಾಭ್ಯಾಸಕ್ಕಾಗಿ ಶಾಲೆಯನ್ನು ತೆರೆಯಲು ಹೇಳಿದರು. ಅದರಂತೆ ಸೋದರಿ ನಿವೇದಿತರವರು ಹೆಣ್ಣುಮಕ್ಕಳ ಶಾಲೆ ತೆರೆದು ಶ್ರೀಮಾತೆ ಶಾರದಾದೇವಿಯವರ ಆಶೀರ್ವಾದ ಪಡೆದು, ಸ್ವಾಮಿಜಿಯವರ ಮಾರ್ಗದರ್ಶನದಂತೆ ನಡೆದು ಧನ್ಯರಾದರು.

"ಕಬ್ಬಿಣದಂಥಹ ಮಾಂಸಖಂಡಗಳು, ಉಕ್ಕಿನಂಥಹ ನರಗಳು, ಪ್ರಬಲ ಇಚ್ಛಾಶಕ್ತಿ, ಕಾರ್ಮುಗಿಲಿನಿಂದ ಸಿಡಿಯುವ, ಸಿಡಿಲಿಗೂ ಬೆಚ್ಚದ ಕ್ಷಾತ್ರವೀರ್ಯ ಇರುವ ಬ್ರಹ್ಮಚರ್ಯ ನಿಷ್ಠರಾದ ಯುವಕರು ಇಂದು ಬೇಕಾಗಿದ್ದಾರೆ' ಎಂದು ಸ್ವಾಮಿಜಿಯವರು 100 ವರ್ಷಗಳ ಹಿಂದೆ ನೀಡಿದ್ದ ಕರೆಯು ಇಂದಿಗೂ, ಎಂದೆಂದಿಗೂ ಸಹ ಪ್ರಸ್ತುತವಾಗಿದೆ .ಅಂಥಹ ಮಹಾಪುರುಷನ ಅದರ್ಶಗಳನ್ನು ಪರಿಪಾಲಿಸುವ ವಿದ್ಯಾಭ್ಯಾಸ ಎಲ್ಲರಿಗೂ ದೊರೆಯುವಂತಾದರೆ ಅದೇ ನಮ್ಮ ಭರತಖಂಡದ ಸುವರ್ಣಯುಗವಾಗುತ್ತದೆ. ●

11ನೇ ಪುಟದಿಂದ... **ಮನವಿ**

ಆದ್ದರಿಂದ ಈ ವಿಷಯದಲ್ಲಿ ವಿನಾ ಕಾರಣ ವಿಳಂಬ ನೀತಿಯನ್ನು ಅನುಸರಿಸದೇ ತಕ್ಷಣ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಸಚಿವರಿಗೆ ಆದೇಶ ಮಾಡುವುದರ ಮೂಲಕ ಸರ್ಕಾರವು ಅನ್ಯಾಯಕ್ಕೊಳಗಾದ ಸಾವಿರಾರು ಶಿಕ್ಷಕರಿಗೆ ಸರ್ವೋಚ್ಚ ನ್ಯಾಯಾಲಯುದ ಆದೇಶದಂತೆ ಎಲ್ಲ ಸೌಲಭ್ಯಗಳನ್ನು ವಿಸ್ತರಿಸಿ ಆದೇಶ ಹೊರಡಿಸಲು ಒತ್ತಾಯಿಸುತ್ತೇವೆ ಹಾಗೂ ದಿನಾಂಕ 17-12-2013 ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ಇವರು ಗುಲಬರ್ಗಾ ಹೈಕೋರ್ಟ್ ಸಂಚಾರಿ ಪೀಠದಲ್ಲಿ ಎರಡು ತಿಂಗಳಲ್ಲಿ ಜಾರಿಗೆ ತರಲಾಗುವುದು ಎಂದು ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ಕೂಡಲೇ ಸರಕಾರ ಈ ಸಮಸ್ಯೆಯ ಬಗ್ಗೆ ಚರ್ಚಿಸಿ ಅನುದಾನಿತ ಶಾಲಾ ಕಾಲೇಜುಗಳ ಸಿಬ್ಬಂದಿಗೆ ನ್ಯಾಯ ಒದಗಿಸಿಕೊಡಬೇಕು ಈಗಾಗಲೇ ಸರಕಾರ ಶಿಕ್ಷಕರ ಸಮಸ್ಯೆಗಳಿಗೆ ನಕಾರಾತ್ಮಕ ಧೋರಣೆ ತಳೆದಿರುವುದರಿಂದ ಅನೇಕ ಅನುದಾನ ರಹಿತ ಶಿಕ್ಷಕರು ವಿಷ ತೆಗೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಹೀಗೆ ಮುಂದುವರೆದರೆ ಈ ವಿಷಯಕ್ಕೆ ಸಂಬಂಧಪಟ್ಟ ಸಿಬ್ಬಂದಿ ವಿಷ ತೆಗೆದುಕೊಳ್ಳಬೇಕಾ ? ಸರಕಾರ ಕೂಡಲೇ ಎಚ್ಚರಗೊಂಡು ಅನುದಾನಿತ ಸಿಬ್ಬಂದಿಗಳ ಸಮಸ್ಯೆಯನ್ನು ಶೀಘ್ರದಲ್ಲೇ ಬಗೆಹರಿಸಬೇಕು.

**ಈರನಗೌಡ ಕ. ಪಾಟೀಲ**
ಉಪನ್ಯಾಸಕರು,
ಎಂ.ಎಸ್.ಇರಾನಿ ಪ.ಪೂ. ಕಾಲೇಜು, ಗುಲ್ಬರ್ಗಾ

# ರಾಷ್ಟ್ರಕವಿ ಡಾ. ಜಿ.ಎಸ್.ಎಸ್ ಗೆ ನಮನ



ಕನ್ನಡ ಸಾಹಿತ್ಯ ಸಂಸ್ಕೃತಿಗೆ ಜಿ.ಎಸ್.ಎಸ್ ಕೊಡುಗೆ ಅಪಾರ. ನಾಲ್ಕೈದು ದಶಕಗಳಿಂದಲೂ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕಾವ್ಯ ರಚಿಸುತ್ತಾ ಬಂದ ಕವಿ ಡಾ ಜಿ.ಎಸ್. ಶಿವರುದ್ರಪ್ಪನವರು. ಪ್ರಕೃತಿ ಮತ್ತು ಮಾನವ ಸಂಬಂಧಗಳ ಕಾಳಜಿ ಅವರ ಕಾವ್ಯದ ಮುಖ್ಯ ವಸ್ತುವಾಗಿತ್ತು. ಕೇವಲ ಕವಿ ಮಾತ್ರವಲ್ಲ, ಶ್ರೇಷ್ಠ ವಿಮರ್ಶಕ, ಅಧ್ಯಾಪಕ, ಆಡಳಿತಗಾರ.

'ಸಾಮಗಾನದಿಂದ ಪ್ರಾರಂಭವಾಗಿ ಚೆಲುವು-ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಪ್ರೀತಿ ಇಲ್ಲದ ಮೇಲೆ, ತೆರೆದ ದಾರಿ, ಗೋಡೆ, ಕಾಡಿನ ಕತ್ತಲಲ್ಲಿ, ಅನಾವರಣ, ಪ್ರೀತಿಇಲ್ಲದ ಮೇಲೆ ... ಸಂಕಲನಗಳನ್ನು ಪ್ರಕಟಿಸಿದ್ದಾರೆ. ಪ್ರಾಚೀನ ಹಾಗೂ ಆಧುನಿಕ ಕನ್ನಡ ಕಾವ್ಯಗಳನ್ನು ರಚಿಸಿದ್ದಾರೆ. ಹತ್ತಕ್ಕೂ ಹೆಚ್ಚು ವಿಮರ್ಶಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಪ್ರವಾಸ ಕಥನ, ಚತುರಂಗ ಎಂಬ ಆತ್ಮ ಕಥನ ಹೀಗೆ ಹತ್ತು ಹಲವಾರು ಕೃತಿಗಳನ್ನು ಕನ್ನಡ ಜನತೆಗೆ ನೀಡಿದವರು ಶಿವರುದ್ರಪ್ಪನವರು. ಇವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ ರಾಷ್ಟ್ರಕವಿ ಬಿರುದು ಪ್ರಶಸ್ತಿ ಗೌರವ ಇವು ಅವರಿಗೆ ಸಂದ ಪ್ರಶಸ್ತಿ ಗೌರವಗಳಲ್ಲಿ ಮುಖ್ಯವಾದವು. ಇವರ ಈ ಕೊಡುಗೆಯನ್ನು ಜನತೆ ಮರೆಯುವಂತಹದಲ್ಲ.

ಈ ಚೇತನ 23.12.2013 ಸೋಮವಾರದಂದು ನಮ್ಮೆಲ್ಲರನ್ನೂ ಬಿಟ್ಟು ಅಗಲಿದ್ದಾರೆ. ಆದರೆ ಇವರು ಬರೆದ ಕೃತಿಗಳು ಎಂದೆಂದೂ ಮರೆಯುವಂತಹದಲ್ಲ. ಅವರ ಬದುಕು ಹಾಗೂ ಕೃತಿಗಳು ನಮ್ಮನ್ನು ಸದಾ ಬೆಳಗುವಂತಾಗಲಿ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ●

# ವಿದ್ಯಾರ್ಥಿ ಮಿತ್ರ – 3

## 1. ರಸಪ್ರಶ್ನೆ


ಕೃಷ್ಣರಾಜಸಾಗರ ಎಂಬ ಆಣೆಕಟ್ಟನ್ನು 'ಕಾವೇರಿ' ನದಿಗೆ ಕಟ್ಟಲಾಗಿದೆ. ಈ ಕೆಳಗಿನ ಆಣೆಕಟ್ಟುಗಳ ಯಾವ ನದಿಗಳಿಗೆ ಅಡ್ಡಲಾಗಿ ಕಟ್ಟಲಾಗಿದೆ ಹೇಳಬಲ್ಲಿರಾ ?


ಅ) ವಾಣಿವಿಲಾಸ ಸಾಗರ    ಆ) ಹಿಡಕಲ್ ಜಲಾಶಯ    ಇ) ಆಲಮಟ್ಟಿ ಜಲಾಶಯ


ಈ) ಲಿಂಗನಮಕ್ಕಿ ಜಲಾಶಯ    ಉ) ಚಾಮರಾಜನಗರ ಜಲಾಶಯ

## 2. ಇವರು ಯಾರು ಬಲ್ಲಿರಾ ?










## 3. ಈ ಒಗಟುಗಳನ್ನು ಬಿಡಿಸಬಲ್ಲಿರಾ ?

1. ಅಣ್ಣಪ್ಪನ ತೋಟ, ಹೂ ಬಿಟ್ಟರೆ ಹಾಳು
2. ಅಣ್ಣಯ್ಯನ ಕುದುರೆಗೆ ಮೈಯೆಲ್ಲ ಗಾಯ
3. ಅಣ್ಣ ಎಂದರೆ ಕೊಡುವುದಿಲ್ಲ. ತಮ್ಮ ಎಂದರೆ ಕೊಡುತ್ತದೆ.
4. ಅದು ಭೂಮಿಗಿಂತ ಭಾರವಾದದ್ದು, ನೀರಿಗಿಂತ ತೆಳುವಾದದ್ದು.
5. ಸಂತೇಲಿ ಕೆಂಪಣ್ಣ ಹಾರಾಡ್ತಾನೆ.

## 4. ಪದಬಂಧ

ಇದರಲ್ಲಿರುವ ಹೂವುಗಳ ಹೆಸರುಗಳನ್ನು ಪತ್ತೆ ಹಚ್ಚಿ ಎಡಕ್ಕೂ ಬಲಕ್ಕೂ, ಮೇಲಕ್ಕೂ, ಕೆಳಕ್ಕೂ, ಓರೆಯಾಗಿಯೂ ಅಕ್ಷರಗಳನ್ನು ಮಾದರಿಯಂತೆ ಜೋಡಿಸಿರಿ.

| | | | | | | | |
|---|---|---|---|---|---|---|---|
| ಸು | ಮ | ರು | ಗ | ಪಿ | ಕೇ | ರ | ಸ |
| ಸಂ | ಗಂ | ಜಿ | ದ್ದು | ಡ | ದ | ಮಿ | ಕ |
| ಮೆ | ಪಿ | ಧ | ಮ | ಲ್ಲಿ | ಗೆ | ನೆ | ನ |
| ಲಿ | ಗ | ಗೆ | ರಾ | ಸಿ | ಪ್ರ | ಲಿ | ಕಾಂ |
| ದಾ | ಸ | ವಾ | ಳ | ಜ | ನೀ | ರ | ಬ |
| ವ | ಗು | ಲಾ | ಬಿ | ರ | ಲಾಂ | ಮ | ರ |
| ಕಿ | ಚ | ನೈ | ದಿ | ಲೆ | ಬ | ಲ | ನ |
| ಸ್ಪ | ಟಿ | ಕಾ | ಜ | ನಿ | ರ | ಕ | ತ |

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಸ್ವಾಮಿ ವಿವೇಕಾನಂದರ ಮಾತೃ ಭಕ್ತಿ



■ 'ಶ್ವೇತಾದ್ರಿ'

'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' — ಈ ನುಡಿ ಅನ್ವರ್ಥವಾಗುವುದು ಸ್ವಾಮಿ ವಿವೇಕಾನಂದರಿಗೆ. ತಂದೆ ತಾಯಿಯರನ್ನು ದೇವರಂತೆ ಕಾಣುವುದು ನಮ್ಮ ಸಂಸ್ಕೃತಿ. ಅದರಲ್ಲೂ ಮೊದಲ ಸ್ಥಾನ ತಾಯಿಗೆ. 'ಮಾತೃ ದೇವೋ ಭವ' ಎಂದು ತಾಯಿಯನ್ನು ಪೂಜಿಸುತ್ತೇವೆ. ಅಂತೆಯೇ ವಿವೇಕಾನಂದರಿಗೂ ತಾಯಿ ಭುವನೇಶ್ವರಿ ದೇವಿಯ ಬಗೆಗೆ ಅಪಾರ ಭಕ್ತಿ, ಪೂಜನೀಯ ಭಾವ. "ತಾಯಿಯನ್ನು ಪೂಜಿಸದ ಪಾಪಿಯೊಬ್ಬನೂ ಕೀರ್ತಿವಂತನಾಗಿಲ್ಲ"; "ನನ್ನ ಸಫಲ ಜೀವನಕ್ಕಾಗಿ ಶ್ರೀಭುವನೇಶ್ವರಿ ಮಾತೆಗೆ ಚಿರಋಣಿಯಾಗಿದ್ದೇನೆ". ಎಂಬ ಮಾತುಗಳು ವಿವೇಕಾನಂದರ ತಾಯಿಯ ಬಗೆಗಿನ ಪೂಜನೀಯ ಭಾವನೆಯನ್ನು ಹೊರಹೊಮ್ಮಿಸುತ್ತದೆ.

ನರೇಂದ್ರ (ವಿವೇಕಾನಂದ) ರ ಮೊದಲ ಗುರುವೇ ಅವರ ತಾಯಿ ಭುವನೇಶ್ವರಿ ದೇವಿ. ಆಕೆ ಮಗನಿಗೆ ರಾಮಾಯಣ, ಮಹಾಭಾರತದ ಕಥೆಗಳನ್ನು ಹೇಳಿ ಸುಂದರ ವ್ಯಕ್ತಿತ್ವವನ್ನು ರೂಪಿಸಿದಳು. ಜೊತೆ ಜೊತೆಗೇ ಧೈರ್ಯ, ಸತ್ಯಪ್ರಿಯತೆಗಳನ್ನೂ ಬೆಳೆಸಿದಳು. ಇದರೊಂದಿಗೆ ನರೇಂದ್ರನಿಗೆ ಬಾಲ್ಯದಲ್ಲೇ ಬೆಳೆದ ಇನ್ನೊಂದು ಗುಣ ಔದಾರ್ಯ. ಆ ಗುಣವೇ ಮುಂದೆ ವಿವೇಕಾನಂದರು ಭಾರತದ ಜನರನ್ನು ಉದ್ಧರಿಸಲು ಸಾಧ್ಯವಾಯಿತು ಎಂದು ಹೇಳಬಹುದು. ಭುವನೇಶ್ವರಿದೇವಿ ನರೇಂದ್ರನನ್ನು ಅನವಶ್ಯಕವಾಗಿ ಹೆದರಿಸುತ್ತಿರಲಿಲ್ಲ. ಅವನ ಶ್ರದ್ಧೆಯನ್ನು ಹಾಳು ಮಾಡುತ್ತಿರಲಿಲ್ಲ. ಆದ್ದರಿಂದಲೇ ದಾಸರ ಮಾತಿನಂತೆ ನರೇಂದ್ರ ಬಾಳೆತೋಟದಲಿ ಹನುಮಂತನ್ನು ಹುಡುಕಿ ವಿಫಲನಾಗಿ ಬಂದಾಗ ತಾಯಿ ಭುವನೇಶ್ವರಿ ಅವನ ಶ್ರದ್ಧೆಯನ್ನು ಖಂಡಿಸದೆ "ಮಗೂ, ಹನುಮಂತನು ಅಲ್ಲಿರುವುದೇನೋ ಸತ್ಯ, ಅದರೆ ಇಂದು ಬಹುಶಃ ಶ್ರೀ ರಾಮಚಂದ್ರನು ಹೇಳಿದ ಕಾರ್ಯವನ್ನು ಮಾಡಲು ಹೋಗಿರಬಹುದು. ಅದಕ್ಕೆ ಬರಲಿಲ್ಲ. ಇನ್ನೊಂದು ದಿನ ಸಿಕ್ಕುವನು" ಎಂದು ಸಮಾಧಾನಪಡಿಸಿದಳು. ಸಮಯ ಸಿಕ್ಕಿದಾಗೆಲ್ಲ ಭುವನೇಶ್ವರಿದೇವಿ ನರೇಂದ್ರನಿಗೆ ಕಥೆಗಳ ಮೂಲಕ ಪರಿಶುದ್ಧನಾಗಿರುವಂತೆ; ಗಂಭೀರವಾಗಿರುವಂತೆ; ಇತರರ ಅಭಿಪ್ರಾಯಗಳಿಗೆ (ಭಿನ್ನಾಭಿಪ್ರಾಯವಾದರೂ) ಗೌರವಿಸುವಂತೆ; ಬೇರೆಯವರ ಸ್ವಾತಂತ್ರ್ಯಕ್ಕೆ ಅಡ್ಡಿ ಬರದಂತೆ; ಮೃದು ಹೃದಯಿಯಾಗಿದ್ದು, ಸಂದರ್ಭ ಬಂದರೆ ಕಠೋರವಾಗಿರುವಂತೆ ಬುದ್ಧಿಮಾತು ಹೇಳುತ್ತಿದ್ದರು. ಈ ಎಲ್ಲಾ ಗುಣಗಳನ್ನು ನರೇಂದ್ರನ– ವಿವೇಕಾನಂದರ ಜೀವನದಲ್ಲಿ ಕಾಣಬಹುದು.

ಇಚಿತಹ ಮಾತೆಯನ್ನು ವಿವೇಕಾನಂದರು ಅಕ್ಷರಶಃ ಪೂಜಿಸುತ್ತಿದ್ದರು. ಆದ್ದರಿಂದಲೇ ಸಂಸಾರ ಸಾಗಿಸಲು ತಾಯಿ ಪಡುತ್ತಿದ್ದ ಕಷ್ಟ ನೋಡಿ ಅವರಿಗೆ ನೆರವಾಗಲು ನರೇಂದ್ರ ತಮ್ಮ ಸನ್ಯಾಸ ಸ್ವೀಕಾರವನ್ನು ಮುಂದುಮುಂದಕ್ಕೆ ಹಾಕಿದರು. ಸನ್ಯಾಸಿಯಾದರೂ ಶಂಕರಾಚಾರ್ಯರು ತಮ್ಮ ತಾಯಿಯ ಅಂತ್ಯಕಾಲದಲ್ಲಿ ಅವರ ಸೇವೆ ಮಾಡಿ ಧನ್ಯರಾದಂತೆ ಸ್ವಾಮಿ ವಿವೇಕಾನಂದರು ತಮ್ಮ ತಾಯಿಯ ಅಪೇಕ್ಷೆಯಂತೆ ಅವರಿಗೆ ತೀರ್ಥಯಾತ್ರೆ ಮಾಡಿಸಿದರು. ಪಾಶ್ಚಾತ್ಯ ದೇಶಗಳಿಂದ ಹಿಂತಿರುಗಿದ ಮೇಲೆ ಮಾತೆ ರೋಗಪೀಡಿತರಾದ ಕನಸು ಕಂಡಾಗ ತುಂಬಾ ಚಡಪಡಿಸಿದರು.

ಸ್ವಾಮಿಜಿಯವರಿಗೆ ತಾಯಿಯ ಬಗೆಗೆ ಇದ್ದ ಪೂಜನೀಯ ಭಾವನೆ ತಮ್ಮ ಮಾತೃಭೂಮಿಯ ಬಗೆಗೂ ಇದ್ದುದನ್ನು ಗಮನಿಸಬಹುದು. ವ್ಯಕ್ತಿಗೆ ಜನನಿ, ಜನ್ಮಭೂಮಿ ಎರಡೂ ಪವಿತ್ರವೇ. ಆದ್ದರಿಂದಲೇ ಕನ್ಯಾಕುಮಾರಿಯ ಬಂಡೆಯ ಮೇಲೆ ನಿಂತಾಗ ಹರ್ಷ; ದುಃಖ; ಸರಳತೆ; ಗಾಂಭೀರ್ಯ; ಮುನಿಸು; ಶಾಂತಿ – ಹೀಗೆ ನಾನಾ ಭಾವನೆಗಳು ಸ್ವಾಮಿಜಿಯವರ ಮನಸ್ಸಿನಲ್ಲಿ ಮೂಡಿತು. ಅಧೋಗತಿಗಿಳಿದ ಭರತಖಂಡದ ಚಿತ್ರಣ ಹಾದು ಹೋಯಿತು. ಬದಲಾಗಿ ಸಂಪದ್ಯುಕ್ತವಾದ ಸುಸಂಸ್ಕೃತೀ ಭರತಖಂಡವನ್ನು ಸಂಕಲ್ಪಿಸಿದರು. ತನ್ನ ಜೀವನದ ಧ್ಯೇಯ ಆರ್ಯ ಸಂಸ್ಕೃತಿಯ ಪುನರುತ್ಥಾನ, ಧರ್ಮದ ಪುನರುಜ್ಜೀವನ ಎಂದು ನಿರ್ಧರಿಸಿದರು. "ಹೇ ಜನನಿ, ನಿನಗೆ ಜಯವಾಗಲಿ" ಎಂದುಕೊಂಡರು.

ಸ್ವಾಮಿಜಿಯವರ ಭಾರತಮಾತೆಯ ಮೇಲಿನ ಭಕ್ತಿಯಿಂದಾಗಿಯೇ ಅವರು 'ದೀನ ದೇವೋ ಭವ'; 'ದರಿದ್ರ ದೇವೋ ಭವ; ಮೂರ್ಖ ದೇವೋ ಭವ; ಪಾಪಿ ದೇವೋ ಭವ;' ಎಂದು ಕರೆ ನೀಡಿದರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಚರಿಸಿ ವಿಶ್ವವಿಖ್ಯಾತರಾದರೂ ಭಾರತೀಯರ ಬಡತನವನ್ನು ನಿವಾರಿಸಲು ಚಿಂತಿಸಿದರು, ಪ್ರಯತ್ನಿಸಿದರು, ಪ್ರೇರೇಪಿಸಿದರು.

ವಿವೇಕಾನಂದರಿಗೆ ತಾಯ್ನಾಡು ಭಾರತದ ಬಗ್ಗೆ ಅಪಾರ ಗೌರವ. ಆ ಮಾತೆಗೆ ಅಪಮಾನವಾಗುವುದನ್ನು ಸ್ವಲ್ಪವೂ ಸಹಿಸುತ್ತಿರಲಿಲ್ಲ. ಆದ್ದರಿಂದಲೇ ಅವರು ಪ್ರಯಾಣ ಮಾಡುತ್ತಿದ್ದ ಹಡಗಿನಲ್ಲಿ ಆಂಗ್ಲರು ಎಲ್ಲಾ ಧರ್ಮಗಳ ಗ್ರಂಥಗಳ ಕೆಳಗೆ ಹಿಂದೂ ಧರ್ಮದ ಗ್ರಂಥವನ್ನಿಟ್ಟು, ಆ ಬಗ್ಗೆ ಉದ್ದೇಶಪೂರ್ವಕವಾಗಿ ಸ್ವಾಮೀಜಿಯನ್ನು ಕೆಣಕಿದಾಗ, ಹಿಂದೂ ಧರ್ಮವೇ ಎಲ್ಲಾ ಧರ್ಮಗಳ ಅಡಿಪಾಯ ಎಂದು ಉತ್ತರಿಸಿ ಎದುರೇಟು ನೀಡಿದರು. ಸ್ವಾಮೀಜಿ ವಿದೇಶ ಪ್ರವಾಸದಿಂದ ಹಿಂತಿರುಗಿದಾಗ ಭಾರತದ ಮಣ್ಣನ್ನು ಕಣ್ಣಿಗೊತ್ತಿಕೊಂಡು ತಲೆಯ ಮೇಲಿಟ್ಟುಕೊಂಡರು. ಭಾರತದ ಬಗ್ಗೆ ಏನೆನಿಸುತ್ತದೆ ಎಂಬ ಪ್ರಶ್ನೆಗೆ ಸ್ವಾಮಿಜಿ ಉತ್ತರಿಸಿದ್ದು ಹೀಗೆ: ವಿದೇಶಕ್ಕೆ ಹೋಗುವ ಮುನ್ನ ಭಾರತವನ್ನು ಪ್ರೀತಿಸುತ್ತಿದ್ದೆ. ಈಗ ಆ ಪ್ರೀತಿ ನೂರ್ಮಡಿಯಾಗಿದೆ. ಹೀಗೆ ವಿವೇಕಾನಂದರ ಮಾತೃಭಕ್ತಿ ಮತ್ತು ದೇಶಭಕ್ತಿ ಆದರಣೀಯ, ಅನುಕರಣೀಯ.

♦

# ಚಿತ್ರ ಸುದ್ದಿ



ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಸೂಗೂರು ತಿಪ್ಪೇಸ್ವಾಮಿಯವರನ್ನು ಅವರ ಶೈಕ್ಷಣಿಕ ಸಾಧನೆಗಾಗಿ "ಭಾರತ್ ವಿಭೂಷಣ್ ಸನ್ಮಾನ್ ಪುರಸ್ಕಾರ" ರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಲಾಗಿದೆ. ಇದು ಶಿಕ್ಷಕ ಸಂಘದ ಹೆಮ್ಮೆಯೂ ಹೌದು. ಶ್ರೀಯುತ ತಿಪ್ಪೇಸ್ವಾಮಿಯವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

## ಸ್ವಾಮಿ ವಿವೇಕಾನಂದ (1863-1902)

ಆಧುನಿಕ ಭಾರತದ ದೇಶಪ್ರೇಮಿ - ಸಂತ, ತಮ್ಮ ಬದುಕು ಹಾಗೂ ಸಂದೇಶಗಳ ಮೂಲಕ ಭಾರತದ ಯುವಕರನ್ನು ನಿದ್ರೆಯಿಂದೆಬ್ಬಿಸಿದರು, ಅವರ ಜನ್ಮ ದಿನವಾದ ಜನವರಿ ಹನ್ನೆರಡು "ರಾಷ್ಟ್ರೀಯ ಯುವ ದಿನ" ಎಂದು ಭಾರತ ಸರ್ಕಾರ ಘೋಷಿಸಿದೆ.

ಸ್ವಾಮಿ ವಿವೇಕಾನಂದರನ್ನು ಆಧ್ಯಾತ್ಮನಾಯಕ, ಪ್ರವಾದಿ, ಸಮಾಜ ಪರಿವರ್ತಕ, ರಾಷ್ಟ್ರೀಯವಾದಿ, ತತ್ವಜ್ಞಾನಿ, ಯೋಗಿ, ಬರಹಗಾರ, ಭಾಷಣಕಾರ, ಶಿಕ್ಷಣ ತಜ್ಞ, ಹೀಗೆ ಹಲವು ಹೆಸರುಗಳಿಂದ ಕರೆಯುತ್ತಾರೆ.

ಆದರೆ ಸ್ವಾಮಿ ವಿವೇಕಾನಂದರನ್ನು ಅವರ ಜೀವನದ ಪ್ರತೀ ಹಂತದಲ್ಲೂ ಗಮನಿಸಬೇಕಾದ ಪ್ರಮುಖ ವಿಷಯಗಳೆಂದರೆ, ಅವರ ಯೋಜನೆಗಳು, ಸಂಪರ್ಕ, ನಿರ್ಧಾರ, ಗುರಿ ಮತ್ತು ಕಾರ್ಯವನ್ನು ಹೇಗೆ ನಾಯಕನಾಗಿ ಆಡಳಿತಾತ್ಮಕವಾಗಿ ಜೋಡಿಸಬೇಕು ಎಂಬ ನಾಯಕತ್ವದ ಗುಣ.

IF UNDELIVERED PLEASE RETURN TO SENDER


Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

JANUARY 2014
Date of Posting
20th or 21st of every month







srushtidesigns@gmail.com